**2013ರ ಕರ್ನಾಟಕ ಅಧಿನಿಯಮ ಸಂಖ್ಯೆ: 35**

**ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಅಧಿನಿಯಮ, 2013**

**ಪ್ರಕರಣಗಳ ಪಟ್ಟಿ**

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**ಪ್ರಕರಣಗಳು:**


ಅಧ್ಯಾಯ – I

ಪ್ರಾಥಮಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

ಅಧ್ಯಾಯ– II

ವಿಶ್ವವಿದ್ಯಾಲಯ ಮತ್ತು ಪ್ರಾಯೋಜಕ ನಿಕಾಯ

3. ವಿಶ್ವವಿದ್ಯಾಲಯದ ಸ್ಥಾಪನೆಗೆ ಪ್ರಸ್ತಾವ
4. ವಿಶ್ವವಿದ್ಯಾಲಯದ ಸ್ಥಾಪನೆ
5. ಘಟಕ ಕಾಲೇಜು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಅಧಿಕಾರ
6. ನಿಗಮನಗೊಳಿಸುವುದರ ಪರಿಣಾಮ
7. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು
8. ವಿಶ್ವವಿದ್ಯಾಲಯದ ಅಧಿಕಾರಗಳು
9. ವಿಶ್ವವಿದ್ಯಾಲಯದ ಎಲ್ಲಾ ವರ್ಗಗಳು, ಜಾತಿಗಳು, ಮತ ಮತ್ತು ಲಿಂಗಭೇದವಿಲ್ಲದೆ ಎಲ್ಲರಿಗೂ ಮುಕ್ತವಾಗಿರತಕ್ಕದ್ದು
10. ವಿಶ್ವವಿದ್ಯಾಲಯದಲ್ಲಿ ಬೋಧನೆ
11. ಅನುದಾನಗಳು ಮತ್ತು ಹಣಕಾಸು ನೆರವು
12. ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅಧಿಕಾರ
13. ಪ್ರಾಯೋಜಕ ವಿಶ್ವವಿದ್ಯಾಲಯದ ಅಧಿಕಾರಗಳು

ಅಧ್ಯಾಯ– III

ವಿಶ್ವವಿದ್ಯಾಲಯದ ಅಧಿಕಾರಿಗಳು

14. ವಿಶ್ವವಿದ್ಯಾಲಯಗಳ ಅಧಿಕಾರಿಗಳು
15. ಸಂದರ್ಶಕರು
16. ಅಧ್ಯಕ್ಷರು
17. ಕುಲಪತಿಗಳು
18. ವಿದ್ಯಾಲಯಗಳ ಡೀನ್ ಮತ್ತು ಸಲಹೆಗಾರರು
19. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು(COO&R)

19ಎ. ಮುಖ್ಯ ವ್ಯಾಸಂಗ ಅಧಿಕಾರಿ

20. ಹಣಕಾಸು ಅಧಿಕಾರಿ
21. ಇತರ ಅಧಿಕಾರಿಗಳು

ಅಧ್ಯಾಯ – IV

ವಿಶ್ವವಿದ್ಯಾಲಯದ ಪ್ರಾಧಿಕಾರಗಳು

22. ವಿಶ್ವವಿದ್ಯಾಲಯ ಪ್ರಾಧಿಕಾರಗಳು
23. ಪ್ರಬಂಧಕ ಮಂಡಳಿ ಮತ್ತು ಇದರ ಅಧಿಕಾರಗಳು
24. ವ್ಯವಸ್ಥಾಪನಾ ಮಂಡಳಿ
25. ಶೈಕ್ಷಣಿಕ, ಸಂಶೋಧನೆ ಮತ್ತು ಸ್ನೇಹ ಪರಿಷತ್ತು.
26. [xxxx]
27. ಹಣಕಾಸು ಸಮಿತಿ

28. ಇತರ ಪ್ರಾಧಿಕಾರಗಳು
29. ಒಂದು ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ಸದಸ್ಯತ್ವಕ್ಕೆ ಅನರ್ಹತೆ
30. ಖಾಲಿಸ್ಥಾನ ಇರುವ ಕಾರಣದಿಂದಾಗಿ ವ್ಯವಹರಣೆಗಳು ಅಸಿಂಧುವಾಗತಕ್ಕದ್ದಲ್ಲ
31. ಕಾರ್ಯಸೂಚಿ ವಿಷಯಗಳ ಬಗ್ಗೆ ಉಪಬಂಧಗಳು

## ಅಧ್ಯಾಯ – V
### ಪರಿನಿಯಮಗಳು ಮತ್ತು ವಿನಿಯಮಗಳು

32. ಪರಿನಿಯಮಗಳು
33. ಪರಿನಿಯಮಗಳ ರಚನೆ ವಿಧಾನ
34. ಪರಿನಿಯಮಗಳ ತಿದ್ದುಪಡಿಯ ಅಧಿಕಾರ
35. ವಿನಿಯಮಗಳು
36. ವಿನಿಯಮಗಳ ರಚನೆ ವಿಧಾನ
37. ವಿನಿಯಮಗಳ ತಿದ್ದುಪಡಿಗೆ ಅಧಿಕಾರ
38. ಶುಲ್ಕ ನಿಯಂತ್ರಣ ಸಮಿತಿ

## ಅಧ್ಯಾಯ – VI
### ಸಂಕೀರ್ಣ

39. ನೌಕರರ ಸೇವಾ ಷರತ್ತುಗಳು
40. ಮೇಲ್ಮನವಿ ಹಕ್ಕು
41. ಭವಿಷ್ಯ ನಿಧಿ
42. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ರಚನೆಯ ವಿವಾದಗಳು
43. ಸಮಿತಿಗಳ ರಚನೆ
44. ಆಕಸ್ಮಿಕವಾಗಿ ಖಾಲಿಯಾದ ಸ್ಥಾನಗಳನ್ನು ತುಂಬುವುದು
45. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
46. ತಾತ್ಕಾಲಿಕ ಉಪಬಂಧಗಳು
47. ಶಾಶ್ವತ ಶಾಸನಬದ್ಧ ದತ್ತಿ ನಿಧಿ
48. ವಿಶ್ವವಿದ್ಯಾಲಯದ ದತ್ತಿ ನಿಧಿ
49. ಸಾಮಾನ್ಯ ನಿಧಿ
50. ಅಭಿವೃದ್ಧಿ ನಿಧಿ
51. ನಿಧಿಗಳ ನಿರ್ವಹಣೆ
52. ವಾರ್ಷಿಕ ವರದಿ
53. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ
54. ವಿಶ್ವವಿದ್ಯಾಲಯದ ದಾಖಲೆಗಳ ರುಜುವಾತಿನ ಮಾದರಿ
55. ನಿರ್ದೇಶನಗಳನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ
56. ದಂಡಗಳು
57. ಪ್ರವೇಶಿಸುವ ಮತ್ತು ತನಿಖೆ ಮಾಡುವ ಅಧಿಕಾರ
58. ವಿಶ್ವವಿದ್ಯಾಲಯವನ್ನು ಸಮಾಪನಗೊಳಿಸಲು ನಿರ್ದೇಶನವನ್ನು ನೀಡುವ ಅಧಿಕಾರ
59. ಸಮಾಪನೆಯ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ವೆಚ್ಚಗಳು
60. ತೊಂದರೆಗಳ ನಿವಾರಣೆಗೆ ಅಧಿಕಾರ
61. ರಾಜ್ಯ ಸರ್ಕಾರದ ನಿಯಮಗಳ ರಚನಾಧಿಕಾರ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**2013ರ ಅಧಿನಿಯಮ ಸಂಖ್ಯೆ 35.–** ರಿವೈಟಲೈಸೇಷನ್ ಆಫ್ ಲೋಕಲ್ ಹೆಲ್ತ್ ಟ್ರೆಡಿಷನ್ ಪ್ರತಿಷ್ಠಾನವು ರಾಜ್ಯದಲ್ಲಿ ಏಕಾತ್ಮಕ ಸ್ವರೂಪದ ಒಂದು ಖಾಸಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮುಂದೆ ಬಂದಿದೆ. ಪ್ರಖ್ಯಾತ ಸಂಸ್ಥೆಯೊಂದರಿಂದ ಸ್ಥಾಪಿತವಾಗುವ ಖಾಸಗಿ ವಿಶ್ವವಿದ್ಯಾಲಯವು ಶಿಕ್ಷಣ ಆಕಾಂಕ್ಷಿ ವಿದ್ಯಾರ್ಥಿಗಳಿಗೆ/ಸಂಶೋಧಕರಿಗೆ ಗುಣಮಟ್ಟದ/ಸಂಶೋಧನಾ ಶಿಕ್ಷಣವನ್ನು ವಿಸ್ತರಿಸುವುದಕ್ಕೆ ಖಚಿತವಾಗಿ ನೆರವಾಗುತ್ತದೆ.

ಮೇಲ್ಕಂಡ ಅಂಶಗಳ ದೃಷ್ಟಿಯಿಂದ, ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆಯ ಸ್ಥಾಪನೆಗೆ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಈ ಖಾಸಗಿ ವಿಶ್ವವಿದ್ಯಾಲಯವು "ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ" ಎಂದು ಕರೆಯಲಾಗುವ ಒಂದು ಹೊಸ ವಿಷಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಡಾಕ್ಟೊರಲ್ ಮತ್ತು ಪೋಸ್ಟ್ ಡಾಕ್ಟೊರಲ್ ಸಂಶೋಧನೆಯ ಮೇಲೆ ಮತ್ತು ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಆದ್ದರಿಂದ ಈ ವಿಧೇಯಕ.

(2013ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ:06, ಕಡತ ಸಂಖ್ಯೆ:ಸಂವ್ಯಶಾಇ 41 ಶಾಸನ 2012)

(ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 25ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

### II

**2018ರ ತಿದ್ದುಪಡಿ ಅಧಿನಿಯಮ ಸಂಖ್ಯೆ 13.–** ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆಯನ್ನು ವಿಶ್ವವಿದ್ಯಾಲಯವನ್ನಾಗಿ ಮಾಡುವ ಮೂಲಕ ಅದರ ಕಾರ್ಯಕ್ಷಮತೆ ಮತ್ತು ದಕ್ಷತೆಯನ್ನು ಸುಧಾರಣೆಗೊಳಿಸುವುದಕ್ಕಾಗಿ ಕೆಲವು ಉಪಬಂಧಗಳನ್ನು ಕಲ್ಪಿಸಲು ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ 35) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ 06, ಕಡತ ಸಂಖ್ಯೆ:ಸಂವ್ಯಶಾಇ 47 ಶಾಸನ 2014)

(ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 25ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

### III

**2018ರ ತಿದ್ದುಪಡಿ ಅಧಿನಿಯಮ ಸಂಖ್ಯೆ 13.–** ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆಯನ್ನು ವಿಶ್ವವಿದ್ಯಾಲಯವನ್ನಾಗಿ ಮಾಡುವ ಮೂಲಕ ಅದರ ಕಾರ್ಯಕ್ಷಮತೆ ಮತ್ತು ದಕ್ಷತೆಯನ್ನು ಸುಧಾರಣೆಗೊಳಿಸುವುದಕ್ಕಾಗಿ ಕೆಲವು ಉಪಬಂಧಗಳನ್ನು ಕಲ್ಪಿಸಲು ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ 35) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ 06, ಕಡತ ಸಂಖ್ಯೆ:ಸಂವ್ಯಶಾಇ 47 ಶಾಸನ 2014)

(ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 25ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

---

**2013ರ ಕರ್ನಾಟಕ ಅಧಿನಿಯಮ ಸಂಖ್ಯೆ: 35**

(2013ರ ಮಾರ್ಚ್ ಹದಿನೈದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ [1][ವಿಶ್ವವಿದ್ಯಾಲಯ][1] ಅಧಿನಿಯಮ, 2013**

(2013ರ ಮಾರ್ಚ್ ಹನ್ನೊಂದನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

(2018ರ 13ನೇ ಇದರ ಮೂಲಕ ತಿದ್ದುಪಡಿಯಾದಂತೆ)

ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಹಾಗೂ ತತ್ಸಂಬಂಧಿತ ವಲಯಗಳಿಗೆ ಮತ್ತು ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳಲ್ಲಿ ಅಸಾಧಾರಣ ನೇತೃತ್ವ, ಸಂಶೋಧನೆ, ಜ್ಞಾನ ಮತ್ತು ವಿಚಾರಧಾರೆಗಳ ಅಭಿವೃದ್ಧಿಯ ಮೂಲಕ ಆರೋಗ್ಯ ವಿಜ್ಞಾನ ಕ್ಷೇತ್ರದಲ್ಲಿ ಒಂದು ರೂಢಮೂಲ ಬದಲಾವಣೆಯನ್ನು ಉತ್ತೇಜಿಸಿ, ಪರಿಕಲ್ಪಿಸಿ ಜಾರಿಗೆ ತರುವ ಉದ್ದೇಶದಿಂದ ಖಾಸಗಿ ವಲಯದಲ್ಲಿ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವೊಂದನ್ನು [2][XXX][2] ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸಿ ನಿಗಮಿತಗೊಳಿಸುವುದಕ್ಕಾಗಿ ಒಂದು ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಹಾಗೂ ತತ್ಸಂಬಂಧಿತ ವಲಯಗಳಿಗೆ ಮತ್ತು ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳಲ್ಲಿ ಅಸಾಧಾರಣ ನೇತೃತ್ವ, ಸಂಶೋಧನೆ, ಜ್ಞಾನ ಮತ್ತು ವಿಚಾರಧಾರೆಗಳ ಅಭಿವೃದ್ಧಿಯ ಮೂಲಕ ಆರೋಗ್ಯ ವಿಜ್ಞಾನ ಕ್ಷೇತ್ರದಲ್ಲಿ ಒಂದು ರೂಢಮೂಲ ಬದಲಾವಣೆಯನ್ನು ಉತ್ತೇಜಿಸಿ, ಪರಿಕಲ್ಪಿಸಿ, ಜಾರಿಗೆ ತರುವ ಉದ್ದೇಶದಿಂದ ಖಾಸಗಿ ವಲಯದಲ್ಲಿ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವೊಂದನ್ನು [2][XXX][2] ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸಿ ನಿಗಮಿತಗೊಳಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.
2. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಬಿಟ್ಟುಬಿಡಲಾಗಿದೆ.

## ಅಧ್ಯಾಯ – I

### ಪ್ರಾಥಮಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ [1][ವಿಶ್ವವಿದ್ಯಾಲಯ][1] ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪಿಸತಕ್ಕದ್ದು.

(3) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ [2][ದಿನಾಂಕ][2]ದಂದು ಜಾರಿಗೆ ಬರತಕ್ಕದ್ದು.

2. ಈ ಅಧಿನಿಯಮವು ಅಧಿಸೂಚನೆ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯು 90 ಪಿಟಿಡಿ 2013 ದಿ: 02.04.2013ರ ಮೂಲಕ ದಿ: 02.04.2013ರಿಂದ ಜಾರಿಗೆ ಬಂದಿದೆ

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

[1][(1) "ಶೈಕ್ಷಣಿಕ, ಸಂಶೋಧನೆ ಮತ್ತು ಸ್ನೇಹ (ಔಟ್‌ರೀಚ್) ಪರಿಷತ್ತು" ಎಂದರೆ, 25ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾಲಯದ ಶೈಕ್ಷಣಿಕ, ಸಂಶೋಧನೆ ಮತ್ತು ಸ್ನೇಹ ಪರಿಷತ್ತು;][1]

(2) "ಕಾರ್ಯಸೂಚಿ ವಿಷಯಗಳು", ಎಂದರೆ, ಒಂದು ಸಭೆಯಲ್ಲಿ ಆ ವಿಷಯಗಳನ್ನು ಮತ್ತು ಕಲಾಪಗಳನ್ನು ಅನುಮೋದಿಸಬಹುದೆಂದು ತಮ್ಮ ಸಮ್ಮತಿ ಸೂಚಿಸಿ ಅಧ್ಯಕ್ಷರು ಮುಂಚಿತವಾಗಿಯೇ ಲಿಖಿತ ಅನುಮೋದನೆಯನ್ನು ಕೊಟ್ಟಿದ್ದಾಗ ಮಾತ್ರವೇ ಪ್ರಬಂಧಕರ ಮಂಡಳಿ ಅಥವಾ ವ್ಯವಸ್ಥಾಪನಾ ಮಂಡಳಿ ಅಥವಾ ಸಂದರ್ಭಾನುಸಾರವಾಗಿ ಯಾವುದೇ ಸಮಿತಿಯವರು ಸಭೆಯಲ್ಲಿ ಚರ್ಚೆಗೆ ತೆಗೆದುಕೊಂಡು ನಿರ್ಣಯವನ್ನು ಕೊಡಬಹುದಾದ ಎಲ್ಲಾ ವಿಷಯಗಳು ಮತ್ತು ಕಲಾಪಗಳು;

(3) "ಪ್ರಬಂಧಕರ ಮಂಡಳಿ" ಎಂದರೆ, 23ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ [1][ವಿಶ್ವವಿದ್ಯಾಲಯ][1]ದ ಪ್ರಬಂಧಕರ ಮಂಡಳಿ;

(4) "ವ್ಯವಸ್ಥಾಪನಾ ಮಂಡಳಿ" ಎಂದರೆ, 24ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ [1][ವಿಶ್ವವಿದ್ಯಾಲಯ][1]ದ ವ್ಯವಸ್ಥಾಪನಾ ಮಂಡಳಿ;

(5) "ಕ್ಯಾಂಪಸ್" ಎಂದರೆ, [1][ವಿಶ್ವವಿದ್ಯಾಲಯ][1]ವು ಸ್ಥಾಪಿಸಿದ, ನಿರ್ವಹಿಸಿದ ಯಾವುದೇ ಕ್ಯಾಂಪಸ್;

(6) "ಅಧ್ಯಕ್ಷರು" ಎಂದರೆ, ಪ್ರಾಯೋಜಕ [1][ವಿಶ್ವವಿದ್ಯಾಲಯ][1]ದ ಮುಖ್ಯಸ್ಥರು ;

(7) "ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ಕುಲಸಚಿವರು–(ಸಿಒಒ ಅಂಡ್ ಆರ್)" ಎಂದರೆ [1][ವಿಶ್ವವಿದ್ಯಾಲಯ][1]ದ [1][ಕುಲಪತಿ][1]ಯವರು ನಾಮನಿರ್ದೇಶನ ಮಾಡಿ, ನೇಮಕ ಮಾಡಿದ ವ್ಯಕ್ತಿ ;

[2][(7–ಎ) "ಮುಖ್ಯ ವ್ಯಾಸಂಗ ಅಧಿಕಾರಿ (ಸಿಪಿಒ)" ಎಂದರೆ, ವಿಶ್ವವಿದ್ಯಾಲಯದ ಕುಲಪತಿಯು ನೇಮಕ ಮಾಡಿದ ಒಬ್ಬ ವ್ಯಕ್ತಿ;"][2]

(8) “ಸಮಿತಿಗಳು” ಎಂದರೆ, [1][ವಿಶ್ವವಿದ್ಯಾಲಯ][1]ದ ವಿವಿಧ ಕಾರ್ಯಕರ್ತರು ಸಂದರ್ಭಾನುಸಾರವಾಗಿ ರಚಿಸಿರುವ ಸಮಿತಿಗಳು ಮತ್ತು ಅದರಲ್ಲಿ ನಾಮನಿರ್ದೇಶನ ಸಮಿತಿ, ಹಣಕಾಸು ಸಮಿತಿ ಮತ್ತು ಯಾವುದೇ ಇತರ ಸಮಿತಿಗಳು ಒಳಗೊಳ್ಳುತ್ತವೆ;

(9) “ಘಟಕ ಕಾಲೇಜು” ಎಂದರೆ, ಭಾರತ ಅಥವಾ ವಿದೇಶಗಳಲ್ಲಿ ವಿಶ್ವವಿದ್ಯಾಲಯವು ಹೊಂದಿರುವ ಅಥವಾ ಸ್ಥಾಪಿಸಿರುವ ಒಂದು ಕಾಲೇಜು ಅಥವಾ [1][ವಿಶ್ವವಿದ್ಯಾಲಯ][1];

[1][(10) "ಡೀನ್ ಮತ್ತು ಸಲಹೆಗಾರ"ರು ಎಂದರೆ, ಒಂದು ವಿದ್ಯಾಲಯದ ಡೀನ್ ಮತ್ತು ಸಲಹೆಗಾರರು;"][1]

[1][(11) "ಕುಲಪತಿ" ಎಂದರೆ, ವಿಶ್ವವಿದ್ಯಾಲಯದ ಸಮಗ್ರ ಕಾರ್ಯನಿರ್ವಹಣೆಗೆ ಹೊಣೆಗಾರರಾಗಿರುವ, ಕುಲಾಧಿಪತಿ ಮತ್ತು ಪ್ರಬಂಧಕ ಮಂಡಳಿಯು ವಿಶ್ವವಿದ್ಯಾಲಯದ ಕುಲಪತಿಯಾಗಿ ನಾಮನಿರ್ದೇಶಿಸಿದ ಮತ್ತು ನೇಮಕ ಮಾಡಿದ ಒಬ್ಬ ಸ್ವತಂತ್ರ ವ್ಯಕ್ತಿ;][1]

(12) “ಹಣಕಾಸು ಸಮಿತಿ” ಎಂದರೆ, 27ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ [1][ವಿಶ್ವವಿದ್ಯಾಲಯ][1]ದ ಹಣಕಾಸು ಸಮಿತಿ;

(13) “ಪ್ರತಿಷ್ಠಾನ” ಎಂದರೆ, ಸ್ಥಳೀಯ ಆರೋಗ್ಯ ಪದ್ಧತಿಗಳ ಪುನ:ಚೇತನಗೊಳಿಸುವುದಕ್ಕೆ ಸ್ಥಾಪಿಸಿದ ಒಂದು ಪ್ರತಿಷ್ಠಾನವಾಗಿದ್ದು, ಇದೊಂದು ನೊಂದಾಯಿತವಾದ ಸಾರ್ವಜನಿಕ ನ್ಯಾಸವಾಗಿರುತ್ತದೆ;

(14) “ಸರ್ಕಾರ” ಎಂದರೆ, ಕರ್ನಾಟಕ ಸರ್ಕಾರ;

(15) “[1][ವಿಶ್ವವಿದ್ಯಾಲಯ][1]” ಎಂದರೆ ಈ ಅಧಿನಿಯಮದಡಿಯಲ್ಲಿ ಸ್ಥಾಪಿಸಿದ ಹಾಗೂ ನಿಗಮಿತಗೊಳಿಸಿದ ಅಂತರ್ ವಿಷಯಗಳ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನಕ್ಕೆ (ಐಏಹೆಚ್‌ಎಸ್‌ಟಿ) ಸಂಬಂಧಿಸಿದಂತೆ [1][ವಿಶ್ವವಿದ್ಯಾಲಯ][1] ಎಂದು ಕರೆಯಲ್ಪಡುವ ಒಂದು ವಿಶ್ವವಿದ್ಯಾಲಯ;

(16) “ರಾಷ್ಟ್ರೀಯ ಅಧಿಮಾನ್ಯತಾ [1][ವಿಶ್ವವಿದ್ಯಾಲಯ][1]ಗಳು” ಎಂದರೆ, ವಿಶ್ವವಿದ್ಯಾಲಯ ಅನುದಾನ ಆಯೋಗ, ಅಖಿಲ ಭಾರತ ತಾಂತ್ರಿಕ ವಿದ್ಯಾಪರಿಷತ್ತು, ಭಾರತೀಯ ವೈದ್ಯಕೀಯ ಪರಿಷತ್ತು, ಭಾರತೀಯ ಔಷಧ ವಿಜ್ಞಾನ ಪರಿಷತ್ತು, ರಾಷ್ಟ್ರೀಯ ಮೌಲ್ಯಮಾಪನ ಮತ್ತು ಅಧಿಮಾನ್ಯತಾ ಪರಿಷತ್ತು, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತು ಮುಂತಾದವುಗಳು, ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳುವುದಕ್ಕಾಗಿ ಗುಣಮಟ್ಟಗಳು ಮತ್ತು ಷರತ್ತುಗಳನ್ನು ವಿಧಿಸುವುದಕ್ಕಾಗಿ, ಕೇಂದ್ರ ಸರ್ಕಾರವು ಸ್ಥಾಪಿಸಿರುವ ಒಂದು [1][ವಿಶ್ವವಿದ್ಯಾಲಯ][1] ಮತ್ತು ಇದರಲ್ಲಿ ಸರ್ಕಾರವೂ ಸೇರಿರುತ್ತದೆ;

(17) “ನಿಯಮಿಸಲಾದುದು” ಎಂದರೆ, ಸರ್ಕಾರವು ನಿಯಮಗಳ ಮೂಲಕ ನಿಯಮಿಸಲಾದುದು;

(18) [3][xxx][3]

[1][(19) "ವಿದ್ಯಾಲಯ" ಎಂದರೆ, ಅಂತರ್ ವಿಷಯ ಅಧ್ಯಯನಗಳಿಗೆ ಸಂಬಂಧಿಸಿದ ವಿಶಿಷ್ಟ ಕ್ಷೇತ್ರಗಳನ್ನು ನಿರ್ವಹಿಸುವ, ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಪ್ರಮುಖ ಶೈಕ್ಷಣಿಕ ಘಟಕ ಅಥವಾ ಒಂದು ಘಟಕ ಕೇಂದ್ರ; ಮತ್ತು][1]

(20) ಈ ಅಧಿನಿಯಮಕ್ಕೆ ಸಂಬಂಧಿಸಿದಂತೆ “ಪ್ರಾಯೋಜಕ ಪ್ರಾಧಿಕಾರ” ಅಥವಾ “ಪ್ರಾಯೋಜಕ [1][ವಿಶ್ವವಿದ್ಯಾಲಯ][1]” ಎಂದರೆ, ಪ್ರತಿಷ್ಠಾನ;

(21) “ಅಧ್ಯಾಪಕರು” ಎಂದರೆ, ಒಬ್ಬ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಪ್ರವಾಚಕರು ಅಥವಾ ಉಪನ್ಯಾಸಕರು ಅಥವಾ [1][ವಿಶ್ವವಿದ್ಯಾಲಯ][1]ದಲ್ಲಿ ಅಥವಾ ಒಂದು ಘಟಕ ಕಾಲೇಜಿನಲ್ಲಿ ಬೋಧಿಸುವುದಕ್ಕೆ ಅಥವಾ ಸಂಶೋಧನೆಗೆ ಮಾರ್ಗದರ್ಶನ ನೀಡುವುದಕ್ಕೆ ಶೈಕ್ಷಣಿಕೇತರ ಆದರೆ ಶೈಕ್ಷಣಿಕ ಪರಿಷತ್ತು ಅನುಮೋದಿಸಿರುವ ವೃತ್ತಿಪರ ಹಿನ್ನೆಲೆಯನ್ನು ಹೊಂದಿರುವ ಯಾವೊಬ್ಬ ಸಂಪನ್ಮೂಲ ವ್ಯಕ್ತಿ;

[1][(22) "ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು" ಎಂದರೆ, ಜೈವಿಕ ವೈದ್ಯಕೀಯ ವಿಜ್ಞಾನ, ಜೀವ ವಿಜ್ಞಾನ, ಸಾಮಾಜಿಕ ವಿಜ್ಞಾನಗಳು, ಪರಿಸರ ಅಧ್ಯಯನಗಳು, ವಿನ್ಯಾಸ, ವಾಸ್ತು ಶಿಲ್ಪ, ಪ್ರದರ್ಶನ ಮತ್ತು ಲಲಿತ ಕಲೆಗಳು, ಸಿನಿಮಾ, ಎಂಜಿನಿಯರಿಂಗ್ ಮತ್ತು ವ್ಯವಸ್ಥಾಪನೆ ಹಾಗೂ ಕಾರ್ಯನೀತಿಯ ಅಧ್ಯಯನಗಳನ್ನು ಒಳಗೊಂಡ ಭಾರತೀಯ ಸಾಂಪ್ರದಾಯಿಕ ಆರೋಗ್ಯ ವಿಜ್ಞಾನಗಳು ಮತ್ತು ಇತರ ಜ್ಞಾನ ಪದ್ಧತಿಗಳು.][1]

(23) “ವಿಶ್ವವಿದ್ಯಾಲಯ ಅನುದಾನ ಆಯೋಗ” ಎಂದರೆ, ವಿಶ್ವವಿದ್ಯಾಲಯ ಅನುದಾನಗಳ ಆಯೋಗ ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 3)ರ 4ನೇ ಪ್ರಕರಣದಡಿಯಲ್ಲಿ ಸ್ಥಾಪಿಸಿದ ಆಯೋಗ ;

(24) “ವಿಶ್ವವಿದ್ಯಾಲಯ” ಎಂದರೆ, ಈ ಅಧಿನಿಯಮದಡಿಯಲ್ಲಿ ಸ್ಥಾಪಿತವಾದ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನಗಳಿಗೆ ಸಂಬಂಧಿಸಿದ [1][ವಿಶ್ವವಿದ್ಯಾಲಯ][1];

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

2. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಸೇರಿಸಲಾಗಿದೆ.

3. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಬಿಟ್ಟುಬಿಡಸಲಾಗಿದೆ.

## ಅಧ್ಯಾಯ– II

### [1][ವಿಶ್ವವಿದ್ಯಾಲಯ][1] ಮತ್ತು ಪ್ರಾಯೋಜಕ ನಿಕಾಯ

**3. ವಿಶ್ವವಿದ್ಯಾಲಯದ ಸ್ಥಾಪನೆಗೆ ಪ್ರಸ್ತಾವ.–** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಮತ್ತು ಅದಕ್ಕನುಸಾರವಾಗಿ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವೊಂದನ್ನು ಒಂದು [1][ವಿಶ್ವವಿದ್ಯಾಲಯ][1] ವಾಗಿ ಸ್ಥಾಪಿಸುವ ಹಕ್ಕನ್ನು ಪ್ರತಿಷ್ಠಾನವು ಹೊಂದಿರತಕ್ಕದ್ದು.

(2) ಪ್ರತಿಷ್ಠಾನವು ರಾಜ್ಯ ಸರ್ಕಾರಕ್ಕೆ [1][ವಿಶ್ವವಿದ್ಯಾಲಯ][1] ವನ್ನು ಸ್ಥಾಪಿಸುವ ಪ್ರಸ್ತಾವವನ್ನು ಸಲ್ಲಿಸತಕ್ಕದ್ದು.

(3) ಪ್ರಸ್ತಾಪವು ಈ ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಪ್ರತಿಷ್ಠಾನದ ವಿವರಗಳೊಂದಿಗೆ [1][ವಿಶ್ವವಿದ್ಯಾಲಯ][1]ದ ಧ್ಯೇಯೋದ್ದೇಶಗಳು;

(ii) [1][ವಿಶ್ವವಿದ್ಯಾಲಯ][1]ದ ವ್ಯಾಪ್ತಿ ಮತ್ತು ಸ್ಥಾನಮಾನ ಹಾಗೂ ಭೂಮಿಯ ಲಭ್ಯತೆ;

(iii) ಪ್ರಾರಂಭದ ದಿನಾಂಕದಿಂದ ನಿಕಟ ಶೈಕ್ಷಣಿಕ ವರ್ಷಗಳ ಅವಧಿಯಲ್ಲಿ [1][ವಿಶ್ವವಿದ್ಯಾಲಯ][1]ವು ಕೈಗೊಳ್ಳಬೇಕೆಂದಿರುವ ಅಧ್ಯಯನ ಮತ್ತು ಸಂಶೋಧನಾ ಕಾರ್ಯಕ್ರಮಗಳ ಸ್ವರೂಪ ಮತ್ತು ಬಗೆಗಳು;

(iv) ಪ್ರಾರಂಭಿಸಬೇಕೆಂದು ಪ್ರಸ್ತಾಪಿಸಿರುವ ವ್ಯಾಸಂಗ ವಿಭಾಗಗಳು (ಫ್ಯಾಕಲ್ಟಿಗಳು), ಅಧ್ಯಯನ ಕ್ರಮಗಳು ಮತ್ತು ಸಂಶೋಧನೆಗಳ ಸ್ವರೂಪ;

(v) ಕಟ್ಟಡಗಳು, ಸಲಕರಣೆಗಳು ಮತ್ತು ರಚನಾ ಸೌಕರ್ಯಗಳನ್ನು ಒದಗಿಸುವಂಥ ಕ್ಯಾಂಪಸ್ ಅಭಿವೃದ್ಧಿ;

(vi) ಪ್ರಾರಂಭದ ದಿನಾಂಕದ ನಿಕಟ ಶೈಕ್ಷಣಿಕ ವರ್ಷಗಳ ಅವಧಿಗಾಗಿ ಬಂಡವಾಳ ವೆಚ್ಚದ ಹಂತಗಳು;

(vii) ಬಾಬುವಾರು ಆವರ್ತಕ ವೆಚ್ಚ, ಆರ್ಥಿಕ ಮೂಲಗಳು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗೆ ತಗಲುವ ಅಂದಾಜು ವೆಚ್ಚ;

(viii) ಸಂಪನ್ಮೂಲ ಸಂಗ್ರಹಣೆಗಾಗಿ ಯೋಜನೆ ಮತ್ತು ಅದಕ್ಕೆ ಬಂಡವಾಳದಿಂದ ತಗಲುವ ವೆಚ್ಚ ಹಾಗೂ ಪ್ರತಿಯೊಂದು ಮೂಲಕ್ಕೂ ಮರು ಸಂದಾಯ ಮಾಡುವ ರೀತಿ;

(ix) ವಿದ್ಯಾರ್ಥಿಗಳಿಂದ ಶುಲ್ಕ ವಸೂಲು ಮಾಡಿ ಆಂತರಿಕವಾಗಿ ನಿಧಿ ಸಂಗ್ರಹಿಸುವ ಯೋಜನೆ, ಸಲಹಾ ಸೇವೆ ಮತ್ತು [1][ವಿಶ್ವವಿದ್ಯಾಲಯ][1]ದ ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದ ಇತರ ಚಟುವಟಿಕೆಗಳಿಂದ ನಿರೀಕ್ಷಿತ ವರಮಾನಗಳು ಮತ್ತು ಇತರ ನಿರೀಕ್ಷಿತ ವರಮಾನಗಳು;

(x) ಘಟಕವೊಂದಕ್ಕೆ ತಗಲುವ ವೆಚ್ಚದ ವಿವರಗಳು, ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕ, ಉಚಿತ ಶಿಕ್ಷಣ (ಫ್ರೀಶಿಪ್) ಮತ್ತು ವಿದ್ಯಾರ್ಥಿ ವೇತನದಲ್ಲಿ ನೀಡುವ ರಿಯಾಯಿತಿ ಅಥವಾ ವಿನಾಯತಿಯ ಪರಿಮಿತಿಯ ವಿವರಗಳನ್ನು ಮತ್ತು ಅನಿವಾಸಿ ಭಾರತೀಯರು ಅಥವಾ ಭಾರತೀಯ ಮೂಲದ ವ್ಯಕ್ತಿಗಳಿಗೆ ಅಥವಾ ಅನಿವಾಸಿ ಭಾರತೀಯರು ಅಥವಾ ಭಾರತೀಯ ಮೂಲದ ವ್ಯಕ್ತಿಗಳು ಪ್ರಾಯೋಜಿಸಿದ ವಿದ್ಯಾರ್ಥಿಗಳಿಗೆ ಮತ್ತು ಭಾರತವನ್ನುಳಿದು ಇತರ ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ವಿಧಿಸತಕ್ಕ ಶುಲ್ಕದ ದರಗಳು ಬೇರೆ ಬೇರೆ ಇದ್ದಲ್ಲಿ ಅವುಗಳನ್ನು ಸೂಚಿಸುವ ಶುಲ್ಕ ರಚನೆಯ ವಿವರಗಳು;

(xi) ಸಂಬಂಧಪಟ್ಟ ವಿದ್ಯಾ ವಿಭಾಗದಲ್ಲಿ ಎಷ್ಟು ವರ್ಷಗಳ ಅನುಭವ ಮತ್ತು ಪರಿಣಿತಿಯನ್ನು ಪ್ರತಿಷ್ಠಾನವು ದೊರಕಿಸಿಕೊಡಲಿದೆ ಹಾಗೂ ಅದರ ಹಣಕಾಸಿನ ಸಂಪನ್ಮೂಲಗಳು;

(xii) [1][ವಿಶ್ವವಿದ್ಯಾಲಯ][1]ದಲ್ಲಿರುವ ಅಧ್ಯಯನ ಕ್ರಮಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಇರುವ ವ್ಯವಸ್ಥೆ;

(xiii) [1][ವಿಶ್ವವಿದ್ಯಾಲಯ][1]ವು ಸ್ಥಾಪನೆಯಾಗುವುದಕ್ಕೆ ಮೊದಲು ನೆರವೇರಿಸಬೇಕೆಂದು ರಾಜ್ಯ ಸರ್ಕಾರವು ಅಗತ್ಯಪಡಿಸಬಹುದಾದ ಅಂಥ ಇತರ ಷರತ್ತುಗಳ ನೆರವೇರಿಕೆಯ ಹಂತ.

(4) ಸ್ವೀಕರಿಸಿದ ಪ್ರಸ್ತಾವಗಳನ್ನು ಪರೀಕ್ಷಿಸಲು ರಾಜ್ಯ ಸರ್ಕಾರವು, ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪದನಿಮಿತ್ತ ಸದಸ್ಯರಾದ ಮೂರು ಸದಸ್ಯರುಗಳನ್ನು ಒಳಗೊಂಡ ಒಂದು ಪರಿಶೋಧನಾ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಅದು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**4. [1][ವಿಶ್ವವಿದ್ಯಾಲಯ][1]ದ ಸ್ಥಾಪನೆ.–** (1) ರಾಜ್ಯ ಸರ್ಕಾರವು, ಪರಿಶೋಧನಾ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಪರಿಶೀಲಿಸಿದ ತರುವಾಯ ಮತ್ತು ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ ಪ್ರತಿಷ್ಠಾನವು ಒದಗಿಸಿದ ವಿವರಗಳ ಆಧಾರದ ಮೇಲೆ, ಅದು ಸಾಕಷ್ಟು ಮೂಲ ಸೌಕರ್ಯಗಳನ್ನು ಹೊಂದಿದ್ದು, ಒಂದು [1][ವಿಶ್ವವಿದ್ಯಾಲಯ][1]ವನ್ನು ನಡೆಸಲು ಪ್ರತಿಷ್ಠಾನವು ಸಮರ್ಥವಾಗಿದೆಯೆಂದು ಅದು ಮನಗಂಡರೆ, ಅದು 47ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಶಾಶ್ವತ ಶಾಸನಬದ್ಧ ದತ್ತಿ ನಿಧಿಯನ್ನು ಸ್ಥಾಪಿಸಬೇಕೆಂದು ಪ್ರತಿಷ್ಠಾನಕ್ಕೆ ನಿರ್ದೇಶನ ನೀಡಬಹುದು.

(2) ಶಾಶ್ವತ ಶಾಸನಬದ್ಧ ದತ್ತಿ ನಿಧಿಯ ಸ್ಥಾಪನೆಯ ತರುವಾಯ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, "ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ [1][ವಿಶ್ವವಿದ್ಯಾಲಯ][1]" ಎಂಬ ಹೆಸರಿನ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವೊಂದನ್ನು ಒಂದು [1][ವಿಶ್ವವಿದ್ಯಾಲಯ][1]ವಾಗಿ ರಾಜ್ಯದಲ್ಲಿ ಸ್ಥಾಪಿಸುವುದಕ್ಕೆ ಮಂಜೂರಾತಿಯನ್ನು ನೀಡಬಹುದು.

(3) [1][ವಿಶ್ವವಿದ್ಯಾಲಯ][1]ದ ಕೇಂದ್ರಕಾರ್ಯಸ್ಥಾನವು ರಾಜ್ಯದಲ್ಲಿ, ಪ್ರಾಯೋಜಕ [1][ವಿಶ್ವವಿದ್ಯಾಲಯ][1]ವು ನಿರ್ಧರಿಸಬಹುದಾದ ಅಂಥ ಸ್ಥಳದಲ್ಲಿ ಇರತಕ್ಕದ್ದು. [1][ವಿಶ್ವವಿದ್ಯಾಲಯ][1]ವು ತನ್ನ ಕ್ಯಾಂಪಸ್ಸುಗಳನ್ನು ಅಥವಾ ಪ್ರಾದೇಶಿಕ ಕೇಂದ್ರಗಳನ್ನು, ಅಧ್ಯಯನ ಕೇಂದ್ರಗಳನ್ನು ರಾಜ್ಯದೊಳಗೆ ವಿಶ್ವವಿದ್ಯಾಲಯ ಅನುದಾನ ಆಯೋಗದ ಮತ್ತು ರಾಷ್ಟ್ರೀಯ ಅಧಿಮಾನ್ಯತಾ [1][ವಿಶ್ವವಿದ್ಯಾಲಯ][1]ಗಳ ಗುಣಮಟ್ಟಗಳಿಗನುಸಾರವಾಗಿ ಹೊಂದಿರತಕ್ಕದ್ದು.

(4) ಮೊದಲ ಅಧ್ಯಕ್ಷರು ಮತ್ತು ರಾಷ್ಟ್ರೀಯ ಅಧಿಮಾನ್ಯತಾ [1][ವಿಶ್ವವಿದ್ಯಾಲಯ][1]ಗಳ ಮೊದಲ [1][ಕುಲಪತಿ][1]ಗಳು, ಪ್ರಬಂಧಕ ಮಂಡಳಿಯ ಮೊದಲ ಸದಸ್ಯರುಗಳು, ವ್ಯವಸ್ಥಾಪನಾ ಮಂಡಳಿಯ ಹಾಗೂ ಶೈಕ್ಷಣಿಕ ಪರಿಷತ್ತಿನ ಮೊದಲ ಸದಸ್ಯರುಗಳು ಮತ್ತು ಇನ್ನು ಮುಂದೆ, ಅಂಥ ಅಧಿಕಾರಿಗಳು ಅಥವಾ ಸದಸ್ಯರುಗಳಾಗಬಹುದಾದಂಥ ಎಲ್ಲಾ ವ್ಯಕ್ತಿಗಳು, ಅಂಥ ಪದ ಅಥವಾ ಸದಸ್ಯತ್ವವನ್ನು ಹೊಂದಿರುವುದು ಮುಂದುವರೆಯುವವರೆಗೆ, ಒಂದು ನಿಗಮಿತ ನಿಕಾಯವನ್ನು ರಚಿಸತಕ್ಕದ್ದು ಮತ್ತು ಅದು [1][ವಿಶ್ವವಿದ್ಯಾಲಯ][1]ದ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೊಳಗಾಗಬಹುದು.

(5) (2)ನೇ ಉಪಪ್ರಕರಣದ ಅಡಿಯಲ್ಲಿ [1][ವಿಶ್ವವಿದ್ಯಾಲಯ][1]ದ ಸ್ಥಾಪನೆಗೆ ಮಂಜೂರಾತಿಯಾದ ಮೇಲೆ, [1][ವಿಶ್ವವಿದ್ಯಾಲಯ][1]ದ ಉದ್ದೇಶಕ್ಕಾಗಿ, ಪ್ರತಿಷ್ಠಾನವು ಆರ್ಜಿಸಿದ, ಸೃಜಿಸಿದ, ಏರ್ಪಾಟು ಮಾಡಿಕೊಂಡ ಅಥವಾ ಕಟ್ಟಲ್ಪಟ್ಟ ಭೂಮಿ ಮತ್ತು ಇತರ ಚರ ಮತ್ತು ಸ್ಥಿರ ಸ್ವತ್ತು, [1][ವಿಶ್ವವಿದ್ಯಾಲಯ][1]ದಲ್ಲಿ ನಿಹಿತವಾಗಿರತಕ್ಕದ್ದು.

(6) [1][ವಿಶ್ವವಿದ್ಯಾಲಯ][1]ವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

(7) [1][ವಿಶ್ವವಿದ್ಯಾಲಯ][1]ದಲ್ಲಿನ ಭೂಮಿ, ಕಟ್ಟಡ ಮತ್ತು ಇತರ ಸ್ವತ್ತುಗಳನ್ನು [1][ವಿಶ್ವವಿದ್ಯಾಲಯ][1]ದ ಉದ್ದೇಶಗಳಿಗೆ ಅನುಷಂಗಿಕವಾಗಿರುವುದನ್ನು ಹೊರತುಪಡಿಸಿ ಯಾವುದೇ ಇತರ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**5. ಘಟಕ ಕಾಲೇಜು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಅಧಿಕಾರ.–** ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ ಮತ್ತು ಇತರ ರಾಷ್ಟ್ರೀಯ ಅಧಿಮಾನ್ಯತಾ [1][ವಿಶ್ವವಿದ್ಯಾಲಯ][1]ಗಳ ಗುಣಮಟ್ಟಗಳಿಗೆ ಒಳಪಟ್ಟು, [1][ವಿಶ್ವವಿದ್ಯಾಲಯ][1]ವು, ರಾಜ್ಯದಲ್ಲಿ ತನಗೆ ಸೂಕ್ತವೆನಿಸುವಂಥ ಸ್ಥಳಗಳಲ್ಲಿ ಘಟಕ ಕಾಲೇಜುಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಹೊಂದಿರಬಹುದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**6. ನಿಗಮನಗೊಳಿಸುವುದರ ಪರಿಣಾಮ.–** ಗೊತ್ತುಪಡಿಸಿದ ದಿನಾಂಕದಂದು ಮತ್ತು ದಿನಾಂಕದಿಂದ,–

(ಎ) ಯಾವುದೇ ಕರಾರು ಅಥವಾ ಇತರೆ ಲಿಖಿತದಲ್ಲಿ ಅಂತರ-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ [1][ವಿಶ್ವವಿದ್ಯಾಲಯ][1]ದ ಯಾವುದೇ ಉಲ್ಲೇಖವನ್ನು [1][ವಿಶ್ವವಿದ್ಯಾಲಯ][1]ದ ಉಲ್ಲೇಖದಂತೆ ಭಾವಿಸತಕ್ಕದ್ದು.

[2][(ಬಿ) XXX][2]

[2][(ಸಿ) XXX][2]

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.
2. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಬಿಟ್ಟುಬಿಡಸಲಾಗಿದೆ.

**7. [1][ವಿಶ್ವವಿದ್ಯಾಲಯ][1]ದ ಧ್ಯೇಯೋದ್ದೇಶಗಳು.–** [1][ವಿಶ್ವವಿದ್ಯಾಲಯ][1]ವು, ತನ್ನ ಭವಿಷ್ಯದ್‌ದೃಷ್ಟಿ ಮತ್ತು ಧ್ಯೇಯೋದ್ದೇಶಗಳನ್ನು ಸಾಧಿಸಲು ಈ ಮುಂದಿನಂತೆ ವಿವಿಧ ಬಗೆಯ ಕಾರ್ಯತಂತ್ರಗಳನ್ನು ಕೈಗೊಳ್ಳಬಹುದು:–

(i) ಪ್ರಜ್ಞಾವಂತ ಸಮಾಜದ ಸೃಜನೆಗಾಗಿ ಸಾಮಾಜಿಕವಾದ ಸುಸಂಬದ್ಧ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸಂಶೋಧನೆ ಮತ್ತು ಬೋಧನೆಗಾಗಿ ಸುಭದ್ರ ನೆಲೆಗಟ್ಟನ್ನು ರೂಪಿಸುವುದು;

(ii) ವೈದ್ಯಕೀಯ ಪದವಿ, ಪ್ರಾಕೃತಿಕ ಮತ್ತು ಸಾಮಾಜಿಕ ವಿಜ್ಞಾನಗಳ ಪದವಿ, ಡಾಕ್ಟೊರೇಟ್ ಪದವಿಯ (doctoral) ಮತ್ತು ಪೋಸ್ಟ್ ಡಾಕ್ಟೊರಲ್ ಫೆಲೊಗಳಾಗಿರುವ ವಿಷಯಿಕ ಆರೋಗ್ಯ ವಿಜ್ಞಾನಗಳ ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ಸಂಶೋಧನೆ ಮತ್ತು ಬೋಧನೆಯನ್ನು ಬೆಂಬಲಿಸುವುದು, ಉತ್ತೇಜಿಸುವುದು ಮತ್ತು ಕೈಗೆತ್ತಿಕೊಳ್ಳುವುದು;

(iii) ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನಗಳಲ್ಲಿ ಸಂಶೋಧನೆ ಮತ್ತು ಬೋಧನೆಗಳಿಗೆ ಸಮಗ್ರತಾ ಚೌಕಟ್ಟನ್ನು ಹೊಂದಿರುವುದು;

[1][(iv) ಉನ್ನತ ಗುಣಮಟ್ಟದ ಸಂಪನ್ಮೂಲ ಕೇಂದ್ರವೊಂದನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಭಾರತೀಯ ಸಾಂಪ್ರದಾಯಿಕ ಆರೋಗ್ಯ ವಿಜ್ಞಾನಗಳು, ಜೈವಿಕ ವೈದ್ಯಕೀಯ ವಿಜ್ಞಾನ, ಜೀವ ವಿಜ್ಞಾನಗಳು, ಸಾಮಾಜಿಕ ವಿಜ್ಞಾನಗಳು, ಪರಿಸರ

ಅಧ್ಯಯನಗಳು, ವಿನ್ಯಾಸ, ವಾಸ್ತುಶಿಲ್ಪ, ಪ್ರದರ್ಶನ ಮತ್ತು ಲಲಿತ ಕಲೆಗಳು, ಸಿನಿಮಾ, ಎಂಜಿನಿಯರಿಂಗ್, ವ್ಯವಸ್ಥಾಪನೆ ಮತ್ತು ಕಾರ್ಯನೀತಿಯ ಅಧ್ಯಯನಗಳ ಮೇಲೆ ಬೆಳಕು ಚೆಲ್ಲುವುದು;][1]

(v) ವಾಣಿಜ್ಯೋದ್ಯಮ ಮತ್ತು ವಾಣಿಜ್ಯೋದ್ಯಮಿಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಲು ಸುಭದ್ರ ನೆಲೆಗಟ್ಟನ್ನು ರೂಪಿಸುವುದು ಮತ್ತು ಈಗಷ್ಟೆ ರೂಪುತಳೆಯುತ್ತಿರುವ ಕಂಪನಿಗಳಿಗೆ ಕಾರ್ಯತಂತ್ರದ ಸಲಹೆಗಳನ್ನು ಒದಗಿಸುವುದೂ ಒಳಗೊಂಡಂತೆ ಪ್ರಕರಣದ ಅಧ್ಯಯನಗಳನ್ನು ಅಭಿವೃದ್ಧಿಪಡಿಸುವುದು.

(vi) ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನಗಳ ಅಧ್ಯಯನಕ್ಕೆ ಸಮರ್ಪಿತವಾದಂಥ ಸಂಶೋಧನಾ ಕೇಂದ್ರವನ್ನು ಸೃಜಿಸುವುದು.

[1][(vii) ವಿಶ್ವವಿದ್ಯಾಲಯದ ಬೋಧಕ ವೃಂದದ (ಫ್ಯಾಕಲ್ಟಿ) ಮತ್ತು ಸಂಶೋಧಕರ ಏಳಿಗೆಗಾಗಿ ಮತ್ತು ತರಬೇತಿಗಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಮತ್ತು ಯಾವುದೇ ಇತರ ವಿಶ್ವವಿದ್ಯಾಲಯ ಅಥವಾ ಸಂಸ್ಥೆ ಅಥವಾ ಸಂಘಗಳೊಂದಿಗೆ ಸಹಭಾಗಿಗಳಾಗಿ ನವೀನಾತ್ಮಕ ಪದವಿ ಶಿಕ್ಷಣ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸುವುದು ಮತ್ತು ಅನುಷ್ಠಾನಗೊಳಿಸುವುದು;][1]

(viii) ಯಾವುದೇ [1][ವಿಶ್ವವಿದ್ಯಾಲಯ][1]ದೊಂದಿಗೆ ಸಹಯೋಗ ಹೊಂದಿ ಸಂಶೋಧನೆಯನ್ನು ಮತ್ತು ಹೊಸತನವನ್ನು ಬೆಳಕಿಗೆ ತರುವುದು;

(ix) ಉನ್ನತ ಕಲಿಕೆಗೆ ಪ್ರವೇಶಾವಕಾಶಗಳನ್ನು ಮತ್ತು ನ್ಯಾಯಸಮ್ಮತತೆಗೆ ಉತ್ತೇಜನ ನೀಡುವ ದೃಷ್ಟಿಯಿಂದ, ಕಲಿಕೆಯ ವಿಧಾನಗಳು ಮತ್ತು ಸ್ಥಳಗಳು, ವ್ಯಾಸಂಗ ಕ್ರಮಗಳ ಸಂಯೋಜನೆ, ದಾಖಲಾತಿಗಾಗಿ ಅರ್ಹತೆ, ಪ್ರವೇಶದ ವಯಸ್ಸು, ಪರೀಕ್ಷೆಯನ್ನು ನಡೆಸುವುದು ಮತ್ತು ಕಾರ್ಯಕ್ರಮಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಮ್ಯವಾದ (ಫ್ಲೆಕ್ಸಿಬಲ್) ಮತ್ತು ಮುಕ್ತವಾದ, ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣದ ಅನ್ವೇಷಣಾ ಪದ್ಧತಿಯನ್ನು ಅಳವಡಿಸುವುದು ಹಾಗೂ ಜ್ಞಾನದ ಹೊಸ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಗೆ ಪ್ರೋತ್ಸಾಹಿಸುವುದು, ಶೈಕ್ಷಣಿಕ ಮತ್ತು ಸಮನ್ವಯ ಕಲಿಕೆ, ಇವೆರೆಡಕ್ಕೂ ಸಮನಾದ ಪ್ರಾಮುಖ್ಯತೆಯನ್ನು ನೀಡುವುದು;

(x) ತನ್ನ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳ ಮೂಲಕ ರಾಷ್ಟ್ರೀಯ ಸಮಗ್ರತೆ ಮತ್ತು ಮಾನವ ವ್ಯಕ್ತಿತ್ವದ ಸಮಗ್ರ ವಿಕಾಸಕ್ಕೆ ಪ್ರೋತ್ಸಾಹಿಸುವುದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**8. [1][ವಿಶ್ವವಿದ್ಯಾಲಯ][1]ದ ಅಧಿಕಾರಗಳು.–** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, [1][ವಿಶ್ವವಿದ್ಯಾಲಯ][1]ವು, ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಈ ಮುಂದಿನ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ :–

(ಎ) [1][ವಿಶ್ವವಿದ್ಯಾಲಯ][1]ವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಾರ್ವಜನಿಕ ಆರೋಗ್ಯ, ಸಾಂಕ್ರಾಮಿಕ ರೋಗಗಳ ನಿರ್ವಹಣೆ, ಶಸ್ತ್ರಚಿಕಿತ್ಸೆ, ಜೈವಿಕ ವೈದ್ಯಕೀಯ ಇಂಜಿನಿಯರಿಂಗ್, ಜೈವಿಕ ಅಂಕಿ ಅಂಶಗಳು, ಸಮಾಜ ವಿಜ್ಞಾನ ಮತ್ತು ವೈದ್ಯಶಾಸ್ತ್ರದ ಇತಿಹಾಸ, ಜೈವಿಕ ಮಾಹಿತಿಗಳು, ವ್ಯವಸ್ಥಾಪನ ಅಧ್ಯಯನಗಳು ಮತ್ತು ಕಲೆ ಹಾಗೂ ಸಂಸ್ಕೃತಿಯನ್ನು ಒಳಗೊಂಡಂತೆ ಅಂತರ್–ವಿಷಯ ವೈದ್ಯಕೀಯ ಮತ್ತು ಆರೋಗ್ಯ ವಿಜ್ಞಾನಗಳ ಮೂಲಕ ಅಂಥ ಆಯಾಮಗಳಲ್ಲಿ ಸಂಶೋಧನೆ ಮಾಡಲು ಭವಿಷ್ಯೋದ್ದೇಶದ ಕಾರ್ಯಕ್ರಮಗಳನ್ನು ರೂಪಿಸಲು, ಮತ್ತು ಶಿಕ್ಷಣ ನೀಡಲು ಮತ್ತು [1][ವಿಶ್ವವಿದ್ಯಾಲಯ][1]ದ ಅಭಿವೃದ್ಧಿಗಾಗಿ ಶೈಕ್ಷಣಿಕ ಪರಿಷತ್ತು ಸೂಕ್ತವೆಂದು ಭಾವಿಸಬಹುದಾದ ಅಂಥ ಶಾಖೆಗಳಲ್ಲಿ ಕಲಿಕೆಯ ಮುಂದುವರಿಕೆ ಮತ್ತು ಜ್ಞಾನದ ಪ್ರಸಾರಕ್ಕಾಗಿ ಅವಕಾಶವನ್ನು ಕಲ್ಪಿಸುವುದು;

[1][(ಬಿ) ಪದವಿ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣದಲ್ಲಿ, ಆರೋಗ್ಯ ವಿಜ್ಞಾನ ಶಿಕ್ಷಣದ, ಅದರ ಎಲ್ಲಾ ಶಾಖೆಗಳಲ್ಲಿ ಹಾಗೂ ಭೌತ ಮತ್ತು ಜೀವಶಾಸ್ತ್ರೀಯ ವಿಜ್ಞಾನಗಳು, ಮಾನವಿಕಗಳು (humanities) ಸಾಮಾಜಿಕ ವಿಜ್ಞಾನಗಳು, ಸಿನಿಮಾ, ಪರಿಸರ ಅಧ್ಯಯನಗಳು, ವಿನ್ಯಾಸ, ವಾಸ್ತುಶಿಲ್ಪ, ಪ್ರದರ್ಶನ ಮತ್ತು ಲಲಿತ ಕಲೆಗಳು, ಎಂಜಿನಿಯರಿಂಗ್, ವ್ಯವಸ್ಥಾಪನೆ ಮತ್ತು ಕಾರ್ಯನೀತಿಯ ಅಧ್ಯಯನಗಳಲ್ಲಿ ಉನ್ನತ ಗುಣಮಟ್ಟದ ನವೀನಾತ್ಮಕ ವಿಧಾನಗಳನ್ನು ಅಭಿವೃದ್ಧಿಪಡಿಸುವುದು;][1]

(ಸಿ) ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿಗಳು, ಡಿಪ್ಲೊಮೋಗಳು, ಪ್ರಮಾಣಪತ್ರಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳು ಮತ್ತು ಬಿರುದುಗಳನ್ನು ನೀಡುವುದು;

(ಡಿ) ಗೌರವ ಪದವಿಗಳನ್ನು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(ಇ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದಂಥ ಶುಲ್ಕಗಳು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸುವುದು, ಕೋರುವುದು ಮತ್ತು ಸ್ವೀಕರಿಸುವುದು;

(ಎಫ್) ವಿದ್ಯಾರ್ಥಿಗಳ ವಾಸಕ್ಕೆ ಹಾಲ್‌ಗಳು ಮತ್ತು ವಸತಿ ನಿಲಯಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ವ್ಯವಸ್ಥೆಗೊಳಿಸುವುದು;

(ಜಿ) [1][ವಿಶ್ವವಿದ್ಯಾಲಯ][1]ದ ವಿದ್ಯಾರ್ಥಿಗಳ ನಿವಾಸದ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು ಹಾಗೂ ಶಿಸ್ತನ್ನು ನಿಯಂತ್ರಿಸುವುದು ಮತ್ತು ಅವರ ಆರೋಗ್ಯ, ಯೋಗಕ್ಷೇಮ ಮತ್ತು ಸಾಂಸ್ಕೃತಿಕ ಮತ್ತು ಕಾರ್ಪೋರೇಟ್ ಜೀವನದ ಏಳಿಗೆಗಾಗಿ ಏರ್ಪಾಡುಗಳನ್ನು ಮಾಡುವುದು;

(ಹೆಚ್) ಶೈಕ್ಷಣಿಕ ಮತ್ತು ಇತರ ಹುದ್ದೆಗಳನ್ನು ಪ್ರಾರಂಭಿಸುವುದು ಮತ್ತು ಅದಕ್ಕೆ ನೇಮಕಾತಿಗಳನ್ನು ಮಾಡುವುದು;

(ಐ) ಪರಿನಿಯಮಗಳು ಮತ್ತು ವಿನಿಯಮಗಳನ್ನು ರೂಪಿಸುವುದು ಮತ್ತು ಅವುಗಳನ್ನು ವ್ಯತ್ಯಾಸಗೊಳಿಸುವುದು, ಮಾರ್ಪಾಡುಗೊಳಿಸುವುದು ಅಥವಾ ಹಿಂದಕ್ಕೆ ಪಡೆಯುವುದು;

(ಜೆ) [1][ವಿಶ್ವವಿದ್ಯಾಲಯ][1]ದ ಉದ್ದೇಶಗಳನ್ನು ಮುಂದುವರೆಸುವುದಕ್ಕೆ ಸಂಬಂಧಿಸಿದಂತೆ [1][ವಿಶ್ವವಿದ್ಯಾಲಯ][1]ವು ಅವಶ್ಯಕವೆಂದು ಭಾವಿಸಬಹುದಾದ ಅಂಥ ರೀತಿಯಲ್ಲಿ [1][ವಿಶ್ವವಿದ್ಯಾಲಯ][1]ಕ್ಕೆ ಸೇರಿದ ಅಥವಾ [1][ವಿಶ್ವವಿದ್ಯಾಲಯ][1]ದಲ್ಲಿ ನಿಹಿತವಾದ ಯಾವುದೇ ಸ್ವತ್ತಿನೊಂದಿಗೆ ವ್ಯವಹರಿಸುವುದು;

(ಕೆ) ದಾನಗಳು, ಅನುದಾನಗಳು, ವಂತಿಕೆಗಳು ಅಥವಾ ಉಪಕಾರಗಳನ್ನು ಸ್ವೀಕರಿಸುವುದು ಮತ್ತು ಉಯಿಲುದಾರರು, ವಂತಿಕೆದಾರರು ಅಥವಾ ವರ್ಗಾವಣೆದಾರರುಗಳಿಂದ ಅಥವಾ ಸಂದರ್ಭಾನುಸಾರ ಸಾಲದ ಮೇಲೆ ತೆಗೆದುಕೊಂಡ ಚರಾಸ್ತಿ ಅಥವಾ ಸ್ಥಿರಾಸ್ತಿಯ ಉಯಿಲು ಮತ್ತು ವರ್ಗಾವಣೆಗಳನ್ನು ಸ್ವೀಕರಿಸುವುದು;

(ಎಲ್) [1][ವಿಶ್ವವಿದ್ಯಾಲಯ][1]ಗಳ ಸಾಮಾನ್ಯ ಉದ್ದೇಶಗಳಿಗೆ ಅನುಕೂಲವಾಗಬಹುದಾದಂಥ ರೀತಿಯಲ್ಲಿ ಶಿಕ್ಷಕರು ಮತ್ತು ವಿದ್ವಾಂಸರುಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಅಂಥ [1][ವಿಶ್ವವಿದ್ಯಾಲಯ][1]ಗಳಿಗೆ ಸಂಪೂರ್ಣವಾಗಿ ಅಥವಾ ಭಾಗಶ:ವಾಗಿ ಅಂಥವೇ ಉದ್ದೇಶಗಳನ್ನು ಹೊಂದಿರುವ ಪ್ರಪಂಚದ ಯಾವುದೇ ಭಾಗದಲ್ಲಿನ ಶೈಕ್ಷಣಿಕ ಅಥವಾ ಇತರ [1][ವಿಶ್ವವಿದ್ಯಾಲಯ][1]ಗಳೊಂದಿಗೆ ಸಹಕರಿಸುವುದು ಅಥವಾ ಸಹಯೋಗವನ್ನು ಹೊಂದಿರುವುದು;

(ಎಂ) ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನಗಳು, ಪ್ರಶಸ್ತಿಗಳು, ಬಹುಮಾನಗಳು ಮತ್ತು ಪಾರಿತೋಷಕಗಳನ್ನು ಪ್ರಾರಂಭಿಸುವುದು ಮತ್ತು ನೀಡುವುದು;

(ಎನ್) ಅಂತರ್-ವಿಷಯ ಆರೋಗ್ಯ ವಿಜ್ಞಾನಗಳ ವಿವಿಧ ಆಯಾಮಗಳಿಗೆ ಸಂಬಂಧಿಸಿದಂತೆ ಮಾನಕಗಳು, ವ್ಯವಸ್ಥೆಗಳು ಮತ್ತು ಮಾನದಂಡಗಳನ್ನು ಸ್ಥಾಪಿಸುವುದು;

(ಒ) [1][ವಿಶ್ವವಿದ್ಯಾಲಯ][1]ಕ್ಕೆ ಸಂಬಂಧಿಸಿದ ಅಧ್ಯಯನ ಕ್ಷೇತ್ರಗಳು ಅಥವಾ ಶಿಕ್ಷಣ ವಿಷಯಗಳಲ್ಲಿ ಸಮಾಲೋಚನೆ ನಡೆಸುವುದು;

(ಪಿ) [1][ವಿಶ್ವವಿದ್ಯಾಲಯ][1]ದ ಎಲ್ಲಾ ಅಥವಾ ಯಾವುವೇ ಉದ್ದೇಶಗಳನ್ನು ಸಾಧಿಸಲು ಅವಶ್ಯಕ, ಆನುಷಂಗಿಕ ಅಥವಾ ನೆರವಾಗಬಹುದಾದ ಅಂಥ ಎಲ್ಲ ಕಾರ್ಯಗಳನ್ನೂ ಮಾಡುವುದು;

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**9. [1][ವಿಶ್ವವಿದ್ಯಾಲಯ][1]ವು ಎಲ್ಲಾ ವರ್ಗಗಳು, ಜಾತಿಗಳು, ಮತ ಮತ್ತು ಲಿಂಗಭೇದವಿಲ್ಲದೆ ಎಲ್ಲರಿಗೂ ಮುಕ್ತವಾಗಿರತಕ್ಕದ್ದು.–** [1][ವಿಶ್ವವಿದ್ಯಾಲಯ][1]ದ ಪ್ರವೇಶಗಳು ವರ್ಗ, ಜಾತಿ, ಮತ, ಲಿಂಗ ಅಥವಾ ರಾಷ್ಟ್ರ ಭೇದವಿಲ್ಲದೆ ಎಲ್ಲಾ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು. ಎಲ್ಲಾ ಪ್ರವೇಶಗಳನ್ನು ಅರ್ಹತಾ ಪರೀಕ್ಷೆಗಳಲ್ಲಿನ ಅರ್ಹತೆಯ ಆಧಾರದ ಮೇಲೆ ಮಾಡತಕ್ಕದ್ದು:

ಪರಂತು, ವಿಶ್ವವಿದ್ಯಾಲಯದ ಎಲ್ಲಾ ಕೋರ್ಸುಗಳ ಪ್ರವೇಶದಲ್ಲಿ ಶೇಕಡಾ ನಲವತ್ತರಷ್ಟನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮೀಸಲಿಡತಕ್ಕದ್ದು ಮತ್ತು ಪ್ರವೇಶಗಳನ್ನು ರಾಜ್ಯ ಸರ್ಕಾರವು ಅಥವಾ ಅದರ ಏಜೆನ್ಸಿಯು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಮಾಡತಕ್ಕದ್ದು ಮತ್ತು ಸೀಟುಗಳನ್ನು ಅರ್ಹತೆ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ರೂಪಿಸುವ ಮೀಸಲಾತಿ ನೀತಿಗೆ ಅನುಸಾರವಾಗಿ ಹಂಚಿಕೆ ಮಾಡತಕ್ಕದ್ದು:

ಮತ್ತು ಪರಂತು, ಯಾವುದೇ ಕೋರ್ಸಿನಲ್ಲಿ ಹತ್ತಕ್ಕಿಂತ ಕಡಿಮೆ ಸೀಟುಗಳು ಇರುವಲ್ಲಿ, ಸ್ನಾತಕೋತ್ತರ ಇಂಥ ಕೋರ್ಸುಗಳನ್ನು ಒಟ್ಟಿಗೆ ಒಂದುಗೂಡಿಸುವ ಮೂಲಕ ಮೀಸಲಿಡತಕ್ಕದ್ದು ಮತ್ತು ಯಾವುದೇ ಕೋರ್ಸಿನಲ್ಲಿ ಮೂರು ಸೀಟುಗಳಿಗಿಂತ ಕಡಿಮೆ ಇರುವಲ್ಲಿ, ಅವುಗಳನ್ನು ಸರದಿ ಸುತ್ತಿನಲ್ಲಿ ಮೀಸಲಿಡತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**10. [1][ವಿಶ್ವವಿದ್ಯಾಲಯ][1]ದಲ್ಲಿ ಬೋಧನೆ.–** [1][ವಿಶ್ವವಿದ್ಯಾಲಯ][1]ವು ಸಂಬಂಧಪಟ್ಟ ರಾಷ್ಟ್ರೀಯ ಅಧಿಮಾನ್ಯತಾ [1][ವಿಶ್ವವಿದ್ಯಾಲಯ][1]ಗಳಿಂದ ಅಧಿಮಾನ್ಯತೆಯನ್ನು ಕೋರತಕ್ಕದ್ದು. [1][ವಿಶ್ವವಿದ್ಯಾಲಯ][1]ದಲ್ಲಿನ ಭೋಧನೆಯನ್ನು, ರಾಷ್ಟ್ರೀಯ ಅಧಿಮಾನ್ಯತಾ [1][ವಿಶ್ವವಿದ್ಯಾಲಯ][1]ಗಳ ಗುಣಮಟ್ಟ ಮತ್ತು ಪಠ್ಯಕ್ರಮಗಳಿಗನುಸಾರವಾಗಿ ಹಾಗೂ ಭೋಧನೆ ಮತ್ತು ಮೌಲ್ಯಮಾಪನ ವಿಧಾನಗಳು ರಾಷ್ಟ್ರೀಯ ಅಧಿಮಾನ್ಯತಾ [1][ವಿಶ್ವವಿದ್ಯಾಲಯ][1]ಗಳ ಮಾದರಿಗಳಿಗನುಸಾರವಾಗಿ [1][ವಿಶ್ವವಿದ್ಯಾಲಯ][1]ದ ಮೂಲಕ ಅಥವಾ ಅದರ ಹೆಸರಿನಲ್ಲಿ ನಡೆಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**11. ಅನುದಾನಗಳು ಮತ್ತು ಹಣಕಾಸು ನೆರವು.–** [1][ವಿಶ್ವವಿದ್ಯಾಲಯ][1]ವು ಸ್ವಂತ ಧನಮೂಲ ಉಳ್ಳದ್ದಾಗಿರತಕ್ಕದ್ದು ಮತ್ತು ರಾಜ್ಯದಿಂದ ಅಥವಾ ರಾಜ್ಯದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಇತರ ನಿಕಾಯ ಅಥವಾ ನಿಗಮದಿಂದ ಯಾವುದೇ ನಿರ್ವಹಣೆ, ಸಹಾಯ ಅನುದಾನ ಅಥವಾ ಯಾವುದೇ ಹಣಕಾಸು ನೆರವನ್ನು ಹಕ್ಕಿನಿಂದ ಕೇಳತಕ್ಕದ್ದಲ್ಲ ಅಥವಾ ಅದನ್ನು ಪಡೆಯಲು ಹಕ್ಕನ್ನು ಹೊಂದಿರತಕ್ಕದ್ದಲ್ಲ:

ಪರಂತು, ರಾಜ್ಯವು,–

(ಎ) ಇತರ ರಾಜ್ಯ ಸರ್ಕಾರದ ಸಂಘಟನೆಗಳಿಗೆ ಹಣಕಾಸು ನೆರವನ್ನು ಒದಗಿಸುತ್ತಿರುವಂಥದ್ದೇ ಸಂಶೋಧನೆ, ಅಭಿವೃದ್ಧಿ ಮತ್ತಿತರ ಚಟುವಟಿಕೆಗಳಿಗಾಗಿ; ಅಥವಾ

(ಬಿ) ಸರ್ಕಾರದಿಂದ ನೆರವನ್ನು ಪಡೆಯುವ ಯಾವುದೇ ನಿರ್ದಿಷ್ಟ ಸಂಶೋಧನೆ ಅಥವಾ ಕಾರ್ಯಕ್ರಮಗಳಿಗಾಗಿ; ಮತ್ತು

(ಸಿ) ರಾಜ್ಯ ಕಾರ್ಯನೀತಿಯ ಬದಲಾವಣೆಗೆ ಒಳಪಟ್ಟು ಅಥವಾ ಅನ್ಯಥಾ ಇದೇ ಬಗೆಯ ವಿಶ್ವವಿದ್ಯಾಲಯಗಳ ಪ್ರಯೋಜನಕ್ಕಾಗಿ,

–ಅನುದಾನದ ಮೂಲಕ ಅಥವಾ ಅನ್ಯಥಾ ಹಣಕಾಸು ಬೆಂಬಲವನ್ನು ಒದಗಿಸಬಹುದು:

ಮತ್ತು ಪರಂತು, [1][ವಿಶ್ವವಿದ್ಯಾಲಯ][1]ವು, ಯಾವುದೇ ಇತರ ಮೂಲದಿಂದ ಯಾವುದೇ ಆರ್ಥಿಕ ನೆರವನ್ನು ಸ್ವೀಕರಿಸಬಹುದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**12. ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅಧಿಕಾರ.–** [1][ವಿಶ್ವವಿದ್ಯಾಲಯ][1]ವು, ಈ ಮುಂದಿನವುಗಳಿಗಾಗಿ ವಿದ್ಯಾಲಯಗಳನ್ನು ಸ್ಥಾಪಿಸಬಹುದು:–

(i) ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು

(ii) ಅಂತರ್–ವಿಷಯ ಅಧ್ಯಯನಗಳು

(iii) ಶೈಕ್ಷಣಿಕ ಅನ್ವೇಷಣೆ ಮತ್ತು ಕಾರ್ಯತಂತ್ರದ ಪ್ರಭಾವ

[1][(iv) ನೈಸರ್ಗಿಕ ವೈದ್ಯಕೀಯ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಪರಿಸರ ಅಧ್ಯಯನಗಳು;][1]

[1][(v) ಭಾರತೀಯ ಸಾಂಪ್ರದಾಯಿಕ ಆರೋಗ್ಯ ವಿಜ್ಞಾನಗಳು, ಜೈವಿಕ ವೈದ್ಯಕೀಯ ವಿಜ್ಞಾನ, ಜೀವ ವಿಜ್ಞಾನಗಳು, ವಿನ್ಯಾಸ, ವಾಸ್ತುಶಿಲ್ಪ ಮತ್ತು ಎಂಜಿನಿಯರಿಂಗ್;][1]

[1][(vi) ಸಾಮಾಜಿಕ ವಿಜ್ಞಾನಗಳು, ಮಾನವಿಕಗಳು, ಪ್ರದರ್ಶನ ಮತ್ತು ಲಲಿತ ಕಲೆಗಳು, ಸಿನಿಮಾ ಮತ್ತು ವ್ಯವಸ್ಥಾಪನೆ ಹಾಗೂ ಕಾರ್ಯನೀತಿಯ ಅಧ್ಯಯನಗಳು;][1]

(vii) ಶೈಕ್ಷಣಿಕ ಪರಿಷತ್ತು ಮತ್ತು ವ್ಯವಸ್ಥಾಪನಾ ಮಂಡಳಿಯ ಶಿಫಾರಸ್ಸುಗಳ ಮೇಲೆ ಮತ್ತು ರಾಜ್ಯ ಸರ್ಕಾರ ಮತ್ತು ಸಂಬಂಧಪಟ್ಟ ರಾಷ್ಟ್ರೀಯ ಅಧಿಮಾನ್ಯತ [1][ವಿಶ್ವವಿದ್ಯಾಲಯ][1] ಗಳ ಅನುಮೋದನೆಯೊಂದಿಗೆ ಯಾವುದೇ ಇತರ ಜ್ಞಾನದ ಕ್ಷೇತ್ರಗಳು.

[1][(viii) ವಿದ್ಯಾಲಯಗಳಿಗೆ ಡೀನ್ ಮತ್ತು ಸಲಹೆಗಾರರು ಮುಖ್ಯಸ್ಥರಾಗಿರತಕ್ಕದ್ದು.][1]

(ix) [1][ವಿಶ್ವವಿದ್ಯಾಲಯ][1]ವು ವಿದ್ಯಾಲಯಗಳ ಅಡಿಯಲ್ಲಿ ನಿರ್ದಿಷ್ಟ ದೃಷ್ಟಿಕೋನಗಳೊಂದಿಗೆ (specific foci) ಕೇಂದ್ರಗಳನ್ನು ಸಹ ಸ್ಥಾಪಿಸಬಹುದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**13. ಪ್ರಾಯೋಜಕ [1][ವಿಶ್ವವಿದ್ಯಾಲಯ][1]ದ ಅಧಿಕಾರಗಳು.–** ಪ್ರಾಯೋಜಕ [1][ವಿಶ್ವವಿದ್ಯಾಲಯ][1]ವು [1][ವಿಶ್ವವಿದ್ಯಾಲಯ][1]ಕ್ಕೆ ಸಂಬಂಧಿಸಿದಂತೆ ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಇವುಗಳಲ್ಲಿ ಪ್ರತಿಯೊಂದನ್ನು ಪ್ರಾಯೋಜಕ [1][ವಿಶ್ವವಿದ್ಯಾಲಯ][1]ವು ತನ್ನ ವಿವೇಚನಾನುಸಾರ ಚಲಾಯಿಸಬಹುದು, ಎಂದರೆ:–

(i) ಪ್ರಬಂಧಕ ಮಂಡಳಿಯ ಅಧ್ಯಕ್ಷರನ್ನು ನೇಮಿಸುವುದು ಅಥವಾ ಪುನರ್‌ನೇಮಿಸುವುದು;

(ii) [1][ವಿಶ್ವವಿದ್ಯಾಲಯ][1]ದ ಪ್ರಬಂಧಕ ಮಂಡಳಿಯನ್ನು ರಚಿಸುವುದು;

(iii) ವ್ಯವಸ್ಥಾಪನಾ ಮಂಡಳಿಯ ಸದಸ್ಯರಾಗಿ ನಾಲ್ವರು ವ್ಯಕ್ತಿಗಳನ್ನು ನಾಮನಿರ್ದೇಶಿಸುವುದು, ಇವರಲ್ಲಿ ಪ್ರತಿಯೊಬ್ಬರೂ ತಜ್ಞ ವೃತ್ತಿಪರರೂ ಅಥವಾ ಸಂಶೋಧಕರಾಗಿರತಕ್ಕದ್ದು;

(iv) [1][ವಿಶ್ವವಿದ್ಯಾಲಯ][1]ದ ದತ್ತಿನಿಧಿಗೆ ದೇಣಿಗೆ ನೀಡಲು ನಿಧಿ ಮೂಲಗಳನ್ನು ನಿರ್ಧರಿಸುವುದು;

(v) [1][ವಿಶ್ವವಿದ್ಯಾಲಯ][1]ದಿಂದ ಹಣದ ವಿನಿಯೋಗ ಮತ್ತು ವೆಚ್ಚ ಮಾಡುವ ಬಗ್ಗೆ ಕಾರ್ಯನೀತಿಗಳನ್ನು ನಿರ್ಧರಿಸುವುದು;

(vi) ಈ ಅಧಿನಿಯಮದಲ್ಲಿ ಉಪಬಂಧಿಸಿರುವ ವಿಧಾನದಲ್ಲಿ ಪ್ರಬಂಧಕ ಮಂಡಳಿಯ ಸಭೆಯಲ್ಲಿಯ ವಿವಾದಗಳನ್ನು ಬಗೆಹರಿಸುವುದು;

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ– III
## [1][ವಿಶ್ವವಿದ್ಯಾಲಯ][1]ದ ಅಧಿಕಾರಿಗಳು

**14. [1][ವಿಶ್ವವಿದ್ಯಾಲಯ][1]ದ ಅಧಿಕಾರಿಗಳು.–** ಈ ಮುಂದಿನವರು [1][ವಿಶ್ವವಿದ್ಯಾಲಯ][1]ದ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:–

(i) ಸಂದರ್ಶಕರು;

(ii) ಅಧ್ಯಕ್ಷರು;

(iii) [1][ಕುಲಪತಿ][1];

(iv) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು;

[2][(iv-ಎ) ಮುಖ್ಯ ವ್ಯಾಸಂಗ ಅಧಿಕಾರಿ (ಸಿ.ಪಿ.ಒ)][2]

(v) [1][ಡೀನ್ ಮತ್ತು ಸಲಹೆಗಾರ][1]ರು;

(vi) ಹಣಕಾಸು ಅಧಿಕಾರಿ; ಮತ್ತು

(vii) [1][ವಿಶ್ವವಿದ್ಯಾಲಯ][1]ದ ಅಧಿಕಾರಿಗಳೆಂದು ವ್ಯವಸ್ಥಾಪನಾ ಮಂಡಳಿಯು ಘೋಷಿಸಬಹುದಾದಂಥ ಇತರ ಅಧಿಕಾರಿಗಳು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.
2. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಸೇರಿಸಲಾಗಿದೆ.

**15. ಸಂದರ್ಶಕರು.–** (1) ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ವಿಶ್ವವಿದ್ಯಾಲಯದ ಸಂದರ್ಶಕರಾಗಿರತಕ್ಕದ್ದು ಮತ್ತು ಸಂದರ್ಶಕರು [1][ವಿಶ್ವವಿದ್ಯಾಲಯ][1]ದ ಕಾರ್ಯನಿರ್ವಹಣೆಯ ಸುಧಾರಣೆಗಾಗಿ ಸಲಹೆಗಳನ್ನು ನೀಡಬಹುದು.

(2) ಸಂದರ್ಶಕರು, ಪದವಿಗಳನ್ನು ಮತ್ತು ಡಿಪ್ಲೋಮೊಗಳನ್ನು ಪ್ರದಾನ ಮಾಡಲು [1][ವಿಶ್ವವಿದ್ಯಾಲಯ][1]ದ ಘಟಿಕೋತ್ಸವದಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಸಂದರ್ಶಕರು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) [1][ವಿಶ್ವವಿದ್ಯಾಲಯ][1]ದ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಕಾಗದ ಪತ್ರ ಅಥವಾ ಮಾಹಿತಿಯನ್ನು ಕೇಳುವುದು;

(ii) ಸಂದರ್ಶಕರು ಸ್ವೀಕರಿಸಿದ ಮಾಹಿತಿಯ ಆಧಾರದ ಮೇಲೆ ಮತ್ತು [1][ವಿಶ್ವವಿದ್ಯಾಲಯ][1]ದ ಯಾವುದೇ ಪ್ರಾಧಿಕಾರವು ಮಾಡಿದ ಯಾವುದೇ ಆದೇಶ, ನಡವಳಿಗಳು ಅಥವಾ ಕೈಗೊಂಡ ತೀರ್ಮಾನವು ಅಧಿನಿಯಮ, ವಿನಿಯಮಗಳು ಅಥವಾ ನಿಯಮಗಳಿಗೆ ಅನುಸಾರವಾಗಿಲ್ಲವೆಂದು ಅವರು ಮನಗಂಡರೆ, [1][ವಿಶ್ವವಿದ್ಯಾಲಯ][1]ದ ಹಿತದೃಷ್ಟಿಯಿಂದ ತಾವು ಸೂಕ್ತವೆಂದು ಭಾವಿಸಬಹುದಾದ ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಹಾಗೆ ನೀಡಲಾದ ನಿರ್ದೇಶನಗಳನ್ನು ಸಂಬಂಧಪಟ್ಟ ಎಲ್ಲರೂ ಪಾಲಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**16. ಅಧ್ಯಕ್ಷರು.–** (1) ಅಧ್ಯಕ್ಷರನ್ನು, ಈ ಮುಂದಿನ ಅಧಿಕಾರಗಳೊಂದಿಗೆ, ಐದು ವರ್ಷಗಳ ಅವಧಿಗೆ ಪ್ರಾಯೋಜಕ [1][ವಿಶ್ವವಿದ್ಯಾಲಯ][1]ವು ನೇಮಿಸತಕ್ಕದ್ದು.

(2) ಪ್ರಾಯೋಜಕ [1][ವಿಶ್ವವಿದ್ಯಾಲಯ][1]ದ ಸಂಸ್ಥಾಪಕ ನ್ಯಾಸಧಾರಿಯು ಮೊದಲ ಅಧ್ಯಕ್ಷರಾಗಿತಕ್ಕದ್ದು ಮತ್ತು ಆತನು ಆಜೀವಪರ್ಯಂತ ಅಥವಾ ಆತನು ಪದವನ್ನು ಬಿಟ್ಟುಬಿಡುವವರೆಗೂ ಪದವನ್ನು ಹೊಂದಿರತಕ್ಕದ್ದು.

(3) ಅಧ್ಯಕ್ಷರು, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿತವಾದ ಪರಿನಿಯಮಗಳ ಮೂಲಕ ಆತನಿಗೆ ಪ್ರದತ್ತವಾದ ಅಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು, ಅದು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

[1][(i) ಪ್ರಬಂಧಕ ಮಂಡಳಿಯ ಮುಖ್ಯಸ್ಥರನ್ನಾಗಿ ತನ್ನ ಪ್ರತಿನಿಧಿಯನ್ನು ನಾಮನಿರ್ದೇಶಿಸುವುದು;][1]

(ii) ಸಂದರ್ಶಕರ ಗೈರುಹಾಜರಿಯಲ್ಲಿ [1][ವಿಶ್ವವಿದ್ಯಾಲಯ][1]ದ ಎಲ್ಲಾ ಘಟಿಕೋತ್ಸವಗಳಲ್ಲಿ ಅಧ್ಯಕ್ಷತೆಯನ್ನು ವಹಿಸುವುದು;

(iii) [1][ವಿಶ್ವವಿದ್ಯಾಲಯ][1]ದ ಪ್ರಬಂಧಕ ಮಂಡಳಿಯ ಸದಸ್ಯ ಮತ್ತು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದು ಅಲ್ಲದೆ ಪ್ರಬಂಧಕ ಮಂಡಳಿಯ ಎಲ್ಲಾ ಸಭೆಗಳಲ್ಲಿ ಹಾಜರಾಗುವುದು;

(iv) ಈ ಅಧಿನಿಯಮ ಮತ್ತು ಪರಿನಿಯಮ ಮತ್ತು ವಿನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ [1][ಕುಲಪತಿ][1]ಯನ್ನು ನೇಮಿಸುವುದು ಅಥವಾ ಪುನರ್ನೇಮಿಸುವುದು ಅಥವಾ ಅವರ ನೇಮಕಾತಿಯನ್ನು ಅಂತ್ಯಗೊಳಿಸುವುದು;

(v) ಪ್ರಬಂಧಕ ಮಂಡಳಿಯ ಸದಸ್ಯರಾಗಿ ತಜ್ಞರಾದ/ವಿಜ್ಞಾನಿಗಳಾದ/ವೃತ್ತಿಪರರಾದಂಥ ಮೂವರು ತಜ್ಞ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡತಕ್ಕದ್ದು;

(vi) ಮೊದಲ ವ್ಯವಸ್ಥಾಪನಾ ಮಂಡಳಿಯ, ಹಣಕಾಸು ಸಮಿತಿಯ, ಸಂಶೋಧನಾ ಪರಿಷತ್ತಿನ ಮತ್ತು ಶೈಕ್ಷಣಿಕ ಪರಿಷತ್ತಿನ ರಚನೆಯನ್ನು ಅನುಮೋದಿಸುವುದು;

(vii) ಈ ಅಧಿನಿಯಮದಲ್ಲಿ ಉಪಬಂಧಿಸಿದ ವಿಧಾನದಲ್ಲಿ ವಿವಾದಗಳನ್ನು (ಪ್ರಬಂಧಕ ಮಂಡಳಿಯ ಸಭೆಗಳಲ್ಲಿನ ವಿವಾದಗಳನ್ನು ಹೊರತುಪಡಿಸಿ)ಪರಿಹರಿಸುವುದು;

(viii) ಪದಾಧಿಕಾರಿ ಅಥವಾ ಪದಾಧಿಕಾರಿಗಳು ಅಥವಾ [1][ವಿಶ್ವವಿದ್ಯಾಲಯ][1] ಅಥವಾ [1][ವಿಶ್ವವಿದ್ಯಾಲಯ]ಗಳು ಮತ್ತು [1][ವಿಶ್ವವಿದ್ಯಾಲಯ][1]ದ ಯಾವುದೇ ಇತರ ಪದಾಧಿಕಾರಿ ಅಥವಾ [1][ವಿಶ್ವವಿದ್ಯಾಲಯ][1]ಗಳ ನಡುವೆ ವಿವಾದಗಳು ಉಂಟಾದಲ್ಲಿ, ಆ ವಿವಾದವನ್ನು ಅಧ್ಯಕ್ಷರ ಪರ್ಯಾಲೋಚನೆಗೆ ಕಳುಹಿಸತಕ್ಕದ್ದು ಮತ್ತು ಅಂಥ ವಿವಾದದ

ಸಂದರ್ಭದಲ್ಲಿ ಅಧ್ಯಕ್ಷರ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದಕ್ಕೆ [1][ವಿಶ್ವವಿದ್ಯಾಲಯ][1]ವು ಬದ್ಧವಾಗಿರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**17. [1][ಕುಲಪತಿ][1]ಗಳು.–** (1) [1][ಕುಲಪತಿ][1]ಯವರನ್ನು ಮಂಡಳಿಯು ನಿರ್ಧರಿಸಿದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪ್ರಬಂಧಕ ಮಂಡಳಿಯು ನೇಮಕ ಮಾಡಿದ ಶಿಕ್ಷಣ ತಜ್ಞರು, ತಜ್ಞರು (knowledge experts), ವೃತ್ತಿಪರರನ್ನು ಒಳಗೊಂಡ ಶೋಧನಾ ಸಮಿತಿಯ ಮೂವರು ಸದಸ್ಯರ ಶಿಫಾರಸ್ಸನ್ನು ಆಧರಿಸಿ ಅಧ್ಯಕ್ಷರು ನೇಮಕಮಾಡತಕ್ಕದ್ದು.

(2) [1][ಕುಲಪತಿ][1]ಗಳು [1][ವಿಶ್ವವಿದ್ಯಾಲಯ][1]ದ ಪ್ರಧಾನ ಕಾರ್ಯನಿರ್ವಾಹಕ ಮತ್ತು ಶೈಕ್ಷಣಿಕ ಅಧಿಕಾರಿಯಾಗಿರತಕ್ಕದ್ದು ಮತ್ತು [1][ವಿಶ್ವವಿದ್ಯಾಲಯ][1]ದ ವ್ಯವಹಾರಗಳ ಬಗ್ಗೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು ಹಾಗೂ [1][ವಿಶ್ವವಿದ್ಯಾಲಯ][1]ದ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೊಳಿಸತಕ್ಕದ್ದು.

(3) [1][ಕುಲಪತಿ][1] ಗಳು, [1][ವಿಶ್ವವಿದ್ಯಾಲಯ][1]ಕ್ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ [1][ಮತ್ತು ಕುಲಸಚಿವರನ್ನು (ಸಿಒಒ ಅಂಡ್ ಆರ್) ಹಾಗೂ ಮುಖ್ಯ ವ್ಯಾಸಂಗ ಅಧಿಕಾರಿಯನ್ನು (ಸಿಎಒ)][1] ನಾಮ ನಿರ್ದೇಶನ ಮಾಡತಕ್ಕದ್ದು ಮತ್ತು ನೇಮಕ ಮಾಡತಕ್ಕದ್ದು. [1][ಕುಲಪತಿ][1]ಗಳು, ಈ ಉದ್ದೇಶಕ್ಕಾಗಿ [1][ಕುಲಪತಿ][1]ಗಳಿಂದ ನೇಮಕವಾದ ಸಮಿತಿಗಳು ಸ್ವೀಕರಿಸಿದ ಶಿಫಾರಸ್ಸುಗಳ ಆಧಾರದ ಮೇಲೆ [1][ವಿಶ್ವವಿದ್ಯಾಲಯ][1]ದ ಎಲ್ಲಾ ಡೀನರುಗಳು ಮತ್ತು ಹಿರಿಯ ಅಧ್ಯಾಪಕ ವರ್ಗ (ಫ್ಯಾಕಲ್ಟಿಗಳ) ನೇಮಕಾತಿಗಳ ಅನುಮೋದನೆಗೆ ಹೊಣೆಗಾರರಾಗಿರುತ್ತಾರೆ. [1][ಕುಲಪತಿ][1]ಗಳು ಪರಿನಿಯಮಗಳು ಮತ್ತು ವಿನಿಯಮಗಳು ವಿಧಿಸಬಹುದಾದ ಅಂಥ ಇತರ ಅಧಿಕಾರಿಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. [1][ಕುಲಪತಿ][1]ಗಳ ಸೇವೆಗಳನ್ನು, ಪ್ರಬಂಧಕ ಮಂಡಳಿಯ ಅನುಮೋದನೆಯೊಂದಿಗೆ ಮತ್ತು ಸ್ವಾಭಾವಿಕ ನ್ಯಾಯದ ತತ್ವಗಳನ್ನು ಅನುಸರಿಸಿದ ನಂತರ ಹಾಗೂ ಶಿಸ್ತುಕ್ರಮಗಳ ಆಧಾರದ ಮೇಲೆ ಮುಕ್ತಾಯಗೊಳಿಸುವಿಕೆಯನ್ನೂ ಒಳಗೊಂಡಂತೆ ಆತನ ಪ್ರಕರಣವನ್ನು ಮಂಡಿಸುವುದಕ್ಕೆ ಅವಕಾಶವನ್ನು ನೀಡಿದ ತರುವಾಯ, ಅಧ್ಯಕ್ಷರು ಮುಕ್ತಾಯಗೊಳಿಸಬಹುದು. ಅಧ್ಯಕ್ಷರು ಮತ್ತು ಸಂದರ್ಶಕರ ಗೈರು ಹಾಜರಿಯಲ್ಲಿ [1][ವಿಶ್ವವಿದ್ಯಾಲಯ][1]ದ ಘಟಿಕೋತ್ಸವದ ಅಧ್ಯಕ್ಷತೆಯನ್ನು [1][ಕುಲಪತಿ][1]ಗಳು ವಹಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**18. ವಿದ್ಯಾಲಯಗಳ [1][ಡೀನ್ ಮತ್ತು ಸಲಹೆಗಾರ]ರು[1].–** [1][ವಿಶ್ವವಿದ್ಯಾಲಯ][1]ದಲ್ಲಿಯ ವಿದ್ಯಾಲಯಗಳ [1][ಡೀನ್ ಮತ್ತು ಸಲಹೆಗಾರ][1]ರನ್ನು [1][ಕುಲಪತಿ][1]ಗಳು ನೇಮಕಮಾಡತಕ್ಕದ್ದು ಮತ್ತು ಅವರು ಪರಿನಿಯಮಗಳು ಮತ್ತು ವಿನಿಯಮಗಳಲ್ಲಿ ಹೇಳಲಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**19. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು(COO&R).–** (1) [1][ಕುಲಪತಿ][1]ಗಳು, ಪರಿನಿಯಮಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವ (COO&R)ರನ್ನು ನಾಮ ನಿರ್ದೇಶನ ಮಾಡತಕ್ಕದ್ದು ಮತ್ತು ನೇಮಕ ಮಾಡತಕ್ಕದ್ದು.

(2) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು ಐಟಿ, ಆರ್‌ಒಸಿ ಮುಂತಾದಂಥ ಎಲ್ಲಾ ಸರ್ಕಾರಿ [1][ವಿಶ್ವವಿದ್ಯಾಲಯ][1]ಗಳೊಂದಿಗೆ ದೈನಂದಿನ ಹಣಕಾಸು ಆಡಳಿತ, ಮಾನವ ಸಂಪನ್ಮೂಲಗಳ ನಿರ್ವಹಣೆ, ಶಾಸನ ಪಾಲನಾ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಹೊಣೆಗಾರರಾಗಿರತಕ್ಕದ್ದು ಮತ್ತು ಶೈಕ್ಷಣಿಕ ಘಟಕಗಳಲ್ಲಿ ಕುಲಸಚಿವರ ಪಾತ್ರವನ್ನು ನಿರ್ವಹಿಸತಕ್ಕದ್ದು.

(3) ಎಲ್ಲಾ ಕರಾರುಗಳನ್ನು [1][ವಿಶ್ವವಿದ್ಯಾಲಯ][1]ದ ಪರವಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು ಮಾಡಿಕೊಳ್ಳತಕ್ಕದ್ದು ಮತ್ತು ಅದಕ್ಕೆ ಸಹಿ ಹಾಕತಕ್ಕದ್ದು.

(4) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು [1][ವಿಶ್ವವಿದ್ಯಾಲಯ][1]ದ ಪರವಾಗಿ ದಾಖಲೆಗಳನ್ನು ಅಧಿಕೃತಗೊಳಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಹಾಗೂ ಪರಿನಿಯಮಗಳು ಮತ್ತು ವಿನಿಯಮಗಳ ಮೂಲಕ ಹೇಳಬಹುದಾದಂಥ ಅಥವಾ ಅಧ್ಯಕ್ಷರು ಮತ್ತು ಸಿ.ಇ.ಒ ಇವರು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(5) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು [1][ವಿಶ್ವವಿದ್ಯಾಲಯ][1]ದ ದಾಖಲೆಗಳು ಮತ್ತು ಸಾಮಾನ್ಯ ಮೊಹರಿನ ಯುಕ್ತ ಅಭಿರಕ್ಷೆಯ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು ಮತ್ತು ಅಧ್ಯಕ್ಷರು, [1][ಕುಲಪತಿ][1]ಗಳು ಅಥವಾ ಇತರ ಯಾವುದೇ ಪ್ರಾಧಿಕಾರವು ಕೋರಿದಂಥ ಎಲ್ಲಾ ಅಂಥ ಮಾಹಿತಿಯನ್ನು ಮತ್ತು ದಾಖಲೆಗಳನ್ನು ಅವರ ಮುಂದೆ ಮಂಡಿಸಲು ಬದ್ಧರಾಗಿತಕ್ಕದ್ದು.

(6) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು ಎಲ್ಲಾ ಕಾನೂನು ವ್ಯವಹರಣೆಗಳಲ್ಲಿ [1][ವಿಶ್ವವಿದ್ಯಾಲಯ][1]ವನ್ನು ಪ್ರತಿನಿಧಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

[1]**[19ಎ. ಮುಖ್ಯ ವ್ಯಾಸಂಗ ಅಧಿಕಾರಿ.–** ಮುಖ್ಯ ವ್ಯಾಸಂಗ ಅಧಿಕಾರಿಯು ವಿಶ್ವವಿದ್ಯಾಲಯದ ವಿದ್ಯಾಲಯಗಳ ಸಂಶೋಧನೆ, ಶಿಕ್ಷಣ ಮತ್ತು ಸ್ನೇಹ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದಕ್ಕೆ ಹೊಣೆಗಾರನಾಗಿರತಕ್ಕದ್ದು.][1]

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಸೇರಿಸಲಾಗಿದೆ.

**20. ಹಣಕಾಸು ಅಧಿಕಾರಿ.–** ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು ಹಣಕಾಸು ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು ಮತ್ತು ಅವರು ಪರಿನಿಯಮಗಳು ಮತ್ತು ವಿನಿಯಮಗಳಲ್ಲಿ ಹೇಳಲಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**21. ಇತರ ಅಧಿಕಾರಿಗಳು.–** [1][ವಿಶ್ವವಿದ್ಯಾಲಯ][1]ದ ಇತರ ಅಧಿಕಾರಿಗಳ ನೇಮಕಾತಿಯ ವಿಧಾನ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಅವರ ಅಧಿಕಾರಗಳು ಮತ್ತು ಕರ್ತವ್ಯಗಳು, ನಿಯಮಗಳು ಮತ್ತು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ – IV

## [1][ವಿಶ್ವವಿದ್ಯಾಲಯ][1]ದ ಪ್ರಾಧಿಕಾರಗಳು

**22. [1][ವಿಶ್ವವಿದ್ಯಾಲಯ][1]ದ ಪ್ರಾಧಿಕಾರಗಳು.–** ಈ ಮುಂದಿನವುಗಳು [1][ವಿಶ್ವವಿದ್ಯಾಲಯ][1]ದ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:–

(i) ಪ್ರಬಂಧಕ ಮಂಡಳಿ;

(ii) ವ್ಯವಸ್ಥಾಪನಾ ಮಂಡಳಿ;

[1][(iii) ಶೈಕ್ಷಣಿಕ, ಸಂಶೋಧನೆ ಮತ್ತು ಸ್ನೇಹ ಪರಿಷತ್ತು;][1]

[2][(iv) XXX][2]

(iv) ಹಣಕಾಸು ಸಮಿತಿ; ಮತ್ತು

(v) [1][ವಿಶ್ವವಿದ್ಯಾಲಯ][1]ದ ಪ್ರಾಧಿಕಾರಗಳೆಂದು ವ್ಯವಸ್ಥಾಪನಾ ಮಂಡಳಿಯು ಘೋಷಿಸಬಹುದಾದ ಅಂಥ ಇತರ ಪ್ರಾಧಿಕಾರಗಳು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.
2. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಬಿಟ್ಟುಬಿಡಲಾಗಿದೆ.

**23. ಪ್ರಬಂಧಕ ಮಂಡಳಿ ಮತ್ತು ಇದರ ಅಧಿಕಾರಗಳು.–** (1) ಪ್ರಬಂಧಕ ಮಂಡಳಿಯು ಈ ಮುಂದಿನವರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಅಧ್ಯಕ್ಷರು

(ii) [1][ಕುಲಪತಿ][1]ಗಳು

(iii) ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ;

(iv) [1][ಕುಲಪತಿ][1]ಗಳೊಂದಿಗೆ ಸಮಾಲೋಚಿಸಿ ಅಧ್ಯಕ್ಷರು ನಾಮನಿರ್ದೇಶಿಸಿದಂಥ ಮೂವರು ತಜ್ಞರು/ವಿಜ್ಞಾನಿಗಳು/ವೃತ್ತಿಪರರು.

(v) ಮೂವರು ತಜ್ಞ ವ್ಯಕ್ತಿಗಳು ಇವರಲ್ಲಿ ಪ್ರತಿಯೊಬ್ಬರನ್ನು ಪ್ರಾಯೋಗಿಕ ಮಂಡಳಿಯು ನಾಮನಿರ್ದೇಶನ ಮಾಡಬಹುದು.

(vi) ವಿಶ್ವವಿದ್ಯಾಲಯ ಅನುದಾನ ಆಯೋಗವು ನಾಮನಿರ್ದೇಶಿಸಿದ ಒಬ್ಬ ಶಿಕ್ಷಣ ತಜ್ಞ.

(2) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು ಹಾಗೂ ಡೀನರು ಪ್ರಬಂಧಕ ಮಂಡಳಿಯ ಮತದಾನದ ಹಕ್ಕನ್ನು ಹೊಂದಿಲ್ಲದ ಆಹ್ವಾನಿತರಾಗಿರತಕ್ಕದ್ದು.

(3) ಪ್ರಬಂಧಕ ಮಂಡಳಿಯ ಸದಸ್ಯರ ಪದಾವಧಿ, ಸದಸ್ಯರ ನೇಮಕಾತಿ, ನವೀಕರಣ ಮತ್ತು ತೆಗೆದುಹಾಕುವುದು ಮುಂತಾದವುಗಳು ಪರಿನಿಯಮಗಳಲ್ಲಿ ಹೇಳಬಹುದಾದಂತೆ ಇರತಕ್ಕದ್ದು.

(4) ಪ್ರಬಂಧಕ ಮಂಡಳಿಯ ಸಭೆಗಳಲ್ಲಿ ಅಧ್ಯಕ್ಷರು ಅಧ್ಯಕ್ಷತೆವಹಿಸತಕ್ಕದ್ದು ಹಾಗೂ ಅವರ ಗೈರು ಹಾಜರಿಯಲ್ಲಿ ಪ್ರಾಯೋಜಿಕ [1][ವಿಶ್ವವಿದ್ಯಾಲಯ][1]ವು ನಾಮನಿರ್ದೇಶನ ಮಾಡಿದವರು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಪ್ರಾಯೋಜಿಕ [1][ವಿಶ್ವವಿದ್ಯಾಲಯ][1]ವು ಯಾರನ್ನೂ ನಾಮನಿರ್ದೇಶನ ಮಾಡದೆ ಇದ್ದಲ್ಲಿ [1][ಕುಲಪತಿ][1]ಗಳು ಅಧ್ಯಕ್ಷತೆ ವಹಿಸತಕ್ಕದ್ದು.

(5) ಪ್ರಬಂಧಕ ಮಂಡಳಿಯ ಎಲ್ಲಾ ಸಭೆಗಳಿಗೆ, ಅಂಥ ಸಭೆಯಲ್ಲಿ ಹಾಜರಾಗುವ ಮತ್ತು ಮತದಾನ ಮಾಡುವ ಐದು ಜನ ಸದಸ್ಯರು ಕೋರಂ ಆಗಿರತಕ್ಕದ್ದು:

ಪರಂತು, ಪ್ರಬಂಧಕ ಮಂಡಳಿಯ ಯಾವುದೇ ಸಭೆಯ ಕೋರಂ ಪೂರ್ಣವಾಗಬೇಕಾದರೆ ಅಧ್ಯಕ್ಷರು ಅಥವಾ ಪ್ರಾಯೋಜಕ [1][ವಿಶ್ವವಿದ್ಯಾಲಯ][1]ದ ಒಬ್ಬ ನಾಮನಿರ್ದೇಶಿತರು ಹಾಜರಿರುವುದು ಮತ್ತು ಅಧ್ಯಕ್ಷರು ಅಥವಾ ಪ್ರಾಯೋಜಕ [1][ವಿಶ್ವವಿದ್ಯಾಲಯ][1]ದ ನಾಮನಿರ್ದೇಶಿತರು ಹಾಜರಾಗದೇ ಇದ್ದಾಗ [1][ಕುಲಪತಿ][1]ಗಳು ಹಾಜರಿರುವುದು ಯಾವಾಗಲೂ ಅವಶ್ಯವಾಗಿರತಕ್ಕದ್ದು.

(6) ಕಾರ್ಯಸೂಚಿ ವಿಷಯದ ಪರವಾಗಿ ಅಧ್ಯಕ್ಷರು ಸಕಾರತ್ಮಾಕ ಮತವನ್ನು ನೀಡದ ಹೊರತು, ಯಾವುದೇ ಕಾರ್ಯಸೂಚಿ ವಿಷಯಗಳ ಸಂಬಂಧದಲ್ಲಿ ಪ್ರಬಂಧಕ ಮಂಡಳಿಯ ಸಭೆಯಲ್ಲಿ ಅವರು ಯಾವುದೇ ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದಲ್ಲ ಅಥವಾ ತೀರ್ಮಾನವನ್ನು ಕೈಗೊಳ್ಳತಕ್ಕದ್ದಲ್ಲ.

(7) ಪ್ರಬಂಧಕ ಮಂಡಳಿಯ ಸಭೆಯಲ್ಲಿ ವಿವಾದ ಉಂಟಾದ ಸಂದರ್ಭದಲ್ಲಿ, ಸದರಿ ವಿಷಯವನ್ನು ಪ್ರಾಯೋಜಕ ಮಂಡಳಿಗೆ ಕಳುಹಿಸತಕ್ಕದ್ದು ಮತ್ತು ಅಂಥ ವಿಷಯದ ಸಂಬಂಧದಲ್ಲಿ ಪ್ರಾಯೋಜಕ ಮಂಡಳಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದಕ್ಕೆ [1][ವಿಶ್ವವಿದ್ಯಾಲಯ][1]ವು ಬದ್ಧವಾಗಿರತಕ್ಕದ್ದು.

(8) ಪ್ರಬಂಧಕ ಮಂಡಳಿಯು [1][ವಿಶ್ವವಿದ್ಯಾಲಯ][1]ದ ಪ್ರಧಾನ ಪ್ರಬಂಧಕ [1][ವಿಶ್ವವಿದ್ಯಾಲಯ][1]ವಾಗಿರತಕ್ಕದ್ದು ಮತ್ತು ಅದು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) [1][ವಿಶ್ವವಿದ್ಯಾಲಯ][1]ದ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕಗೊಳಿಸುವುದು;

(ii) [1][ವಿಶ್ವವಿದ್ಯಾಲಯ][1]ವು ಅನುಸರಿಸಬೇಕಾದ ಕಾರ್ಯನೀತಿಗಳನ್ನು ರಚಿಸುವುದು;

(iii) ಈ ಅಧಿನಿಯಮದ ಅಥವಾ ನಿಯಮಗಳ ಮತ್ತು ವಿನಿಯಮಗಳ ಉಪಬಂಧಗಳಿಗೆ ಅನುಗುಣವಾಗಿ ಇರದ [1][ವಿಶ್ವವಿದ್ಯಾಲಯ][1]ದ ಇತರ ಪ್ರಾಧಿಕಾರಗಳ ತೀರ್ಮಾನಗಳನ್ನು ಪುನರೀಕ್ಷಿಸುವುದು;

(iv) [1][ವಿಶ್ವವಿದ್ಯಾಲಯ][1]ದ ಆಯವ್ಯಯ ಮತ್ತು ವಾರ್ಷಿಕ ವರದಿಗಳನ್ನು ಅನುಮೋದಿಸುವುದು;

(v) ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸುವುದು ಅಥವಾ ಈಗಾಗಲೇ ಇರುವ ಪರಿನಿಯಮಗಳನ್ನು ತಿದ್ದುಪಡಿ ಮಾಡುವುದು, ಮಾರ್ಪಾಡು ಮಾಡುವುದು ಅಥವಾ ನಿರಸನಗೊಳಿಸುವುದು;

(vi) [1][ವಿಶ್ವವಿದ್ಯಾಲಯ][1]ವನ್ನು ಸ್ವಯಂಸಮಾಪನಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳುವುದು;

(vii) ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವಗಳನ್ನು ಅನುಮೋದಿಸುವುದು;

(viii) [1][ವಿಶ್ವವಿದ್ಯಾಲಯ][1]ದ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕೆ ಅಪೇಕ್ಷಣೀಯವೆಂದು ಕಂಡುಬರುವಂಥ ತೀರ್ಮಾನಗಳನ್ನು ಮತ್ತು ಕ್ರಮಗಳನ್ನು ಕೈಗೊಳ್ಳುವುದು.

(ix) ಪ್ರತಿಷ್ಠಾನದ ಉದ್ದೇಶವನ್ನು ಮೇಲ್ದರ್ಜೆಗೇರಿಸಲು ಹೊಸ ಅಸ್ಥಿತ್ವಗಳನ್ನು ವ್ಯವಸ್ಥೆಗೊಳಿಸಲು ಇತರ ನಿಕಾಯಗಳು ಮತ್ತು [1][ವಿಶ್ವವಿದ್ಯಾಲಯ][1]ಗಳೊಂದಿಗೆ ಸಹಯೋಗವನ್ನು ಹೊಂದುವುದು ಮತ್ತು ಭಾಗವಹಿಸುವುದು.

(9) ಪ್ರಬಂಧಕ ಮಂಡಳಿಯು ಒಂದು ವರ್ಷದಲ್ಲಿ ಕನಿಷ್ಠ ಮೂರು ಸಲ ಸಭೆ ಸೇರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**24. ವ್ಯವಸ್ಥಾಪನಾ ಮಂಡಳಿ.–** (1) ವ್ಯವಸ್ಥಾಪನಾ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) [1][ಕುಲಪತಿ][1]ಗಳು;

(ii) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು;

(iii) ಪ್ರಾಯೋಜಕ [1][ವಿಶ್ವವಿದ್ಯಾಲಯ][1]ದ ಗರಿಷ್ಠ ನಾಲ್ಕು ಜನ ನಾಮನಿರ್ದೇಶಿತರು, ಇವರಲ್ಲಿ ಪ್ರತಿಯೊಬ್ಬರು ತಜ್ಞ ವೃತ್ತಿಪರರು ಅಥವಾ ಸಂಶೋಧಕರಾಗಿರತಕ್ಕದ್ದು;

(iv) ವಿದ್ಯಾಲಯಗಳ ಎಲ್ಲಾ [1][ಡೀನ್ ಮತ್ತು ಸಲಹೆಗಾರ][1]ರು.

(2) [1][ಕುಲಪತಿ][1]ಗಳು ವ್ಯವಸ್ಥಾಪನಾ [1][ವಿಶ್ವವಿದ್ಯಾಲಯ][1]ದ ಅಧ್ಯಕ್ಷರಾಗಿರತಕ್ಕದ್ದು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿ ಯಾಗಿರತಕ್ಕದ್ದು.

(3) ವ್ಯವಸ್ಥಾಪನಾ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಪರಿನಿಯಮಗಳನ್ನು ರೂಪಿಸುವುದು ಮತ್ತು ಅವುಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(4) ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸಭೆಗಳಲ್ಲಿ ಯಾವಾಗಲೂ [1][ಕುಲಪತಿ][1]ಗಳು ಅಧ್ಯಕ್ಷತೆ ವಹಿಸತಕ್ಕದ್ದು ಹಾಗೂ [1][ಕುಲಪತಿ][1]ಗಳ ಗೈರುಹಾಜರಿಯಲ್ಲಿ ಪ್ರಾಯೋಜಕ [1][ವಿಶ್ವವಿದ್ಯಾಲಯ][1]ವು ನಾಮನಿರ್ದೇಶನ ಮಾಡಿದವರು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಪ್ರಾಯೋಜಕ [1][ವಿಶ್ವವಿದ್ಯಾಲಯ][1]ವು ಯಾರನ್ನೂ ನಾಮನಿರ್ದೇಶನ ಮಾಡದೇ ಇದ್ದ ಸಂದರ್ಭದಲ್ಲಿ ಇತರ ಯಾವೊಬ್ಬ ಸದಸ್ಯರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(5) ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ವಿವಾದ ಉಂಟಾದ ಸಂದರ್ಭದಲ್ಲಿ ಸದರಿ ವಿಷಯವನ್ನು ಅಧ್ಯಕ್ಷರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ವಿಷಯದ ಸಂಬಂಧದಲ್ಲಿ ಅಧ್ಯಕ್ಷರ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದಕ್ಕೆ [1][ವಿಶ್ವವಿದ್ಯಾಲಯ][1]ವು ಬದ್ಧವಾಗಿರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

[1][**25. ಶೈಕ್ಷಣಿಕ, ಸಂಶೋಧನೆ ಮತ್ತು ಸ್ನೇಹ ಪರಿಷತ್ತು.–** (1) ಶೈಕ್ಷಣಿಕ, ಸಂಶೋಧನೆ ಮತ್ತು ಸ್ನೇಹ ಪರಿಷತ್ತು ಈ ಮುಂದಿನವರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಕುಲಪತಿ – ಅಧ್ಯಕ್ಷರು

(ii) ಡೀನ್ ಮತ್ತು ಸಲಹೆಗಾರ – ಸದಸ್ಯರು

(iii) ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು (ಸಿಒಒ ಅಂಡ್ ಆರ್) – ಕಾರ್ಯದರ್ಶಿ

(iv) ಮುಖ್ಯ ವ್ಯಾಸಂಗ ಅಧಿಕಾರಿ – ಸದಸ್ಯರು

(v) ವ್ಯವಸ್ಥಾಪನಾ ಮಂಡಳಿಯು ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸದಸ್ಯರು.

(2) ಶೈಕ್ಷಣಿಕ, ಸಂಶೋಧನೆ ಮತ್ತು ಸ್ನೇಹ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ಶೈಕ್ಷಣಿಕ ಸಂಸ್ಥೆಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯನೀತಿಗಳ ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.][1]

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

[1][**26.** XXX][1]

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಬಿಟ್ಟುಬಿಡಲಾಗಿದೆ.

**27. ಹಣಕಾಸು ಸಮಿತಿ.–** (1) ಹಣಕಾಸು ಸಮಿತಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಅಧ್ಯಕ್ಷರು ಅಥವಾ ಅವರ ನಾಮನಿರ್ದೇಶಕರು – ಅಧ್ಯಕ್ಷರು

(ii) [1][ಕುಲಪತಿ][1]ಗಳು – ಸದಸ್ಯರು

(iii) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು – ಸದಸ್ಯರು

(iv) [1][ಡೀನ್ ಮತ್ತು ಸಲಹೆಗಾರ][1]ರು – ಸದಸ್ಯರು

(v) ಹಣಕಾಸು ಅಧಿಕಾರಿ – ಕಾರ್ಯದರ್ಶಿ

(vi) ಪ್ರಾಯೋಜಕ [1][ವಿಶ್ವವಿದ್ಯಾಲಯ][1]ದ ಒಬ್ಬ ನಾಮನಿರ್ದೇಶಿತರು – ಸದಸ್ಯರು; ಮತ್ತು

(vii) ವ್ಯವಸ್ಥಾಪನಾ ಮಂಡಳಿಯು ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸದಸ್ಯರು.

(2) ಹಣಕಾಸು ಸಮಿತಿಯು ಹಣಕಾಸಿನ ವಿಷಯಗಳ ಜವಾಬ್ದಾರಿಯನ್ನು ವಹಿಸಿಕೊಳ್ಳುವ [1][ವಿಶ್ವವಿದ್ಯಾಲಯ][1]ದ ಪ್ರಧಾನ ಹಣಕಾಸು [1][ವಿಶ್ವವಿದ್ಯಾಲಯ][1]ವಾಗಿರತಕ್ಕದ್ದು ಹಾಗೂ [1][ವಿಶ್ವವಿದ್ಯಾಲಯ][1]ದ ಹಣಕಾಸು ವಿಷಯಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**28. ಇತರ ಪ್ರಾಧಿಕಾರಗಳು.–** [1][ವಿಶ್ವವಿದ್ಯಾಲಯ][1]ದ ಇತರ ಪ್ರಾಧಿಕಾರಗಳ ರಚನೆ, ಅಧಿಕಾರಗಳು ಹಾಗೂ ಪ್ರಕಾರ್ಯಗಳು ಪ್ರಬಂಧಕ ಮಂಡಳಿಯು ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**29. ಒಂದು ಪ್ರಾಧಿಕಾರದ ಅಥವಾ [1][ವಿಶ್ವವಿದ್ಯಾಲಯ][1]ದ ಸದಸ್ಯತ್ವಕ್ಕೆ ಅನರ್ಹತೆ.–** [1][ವಿಶ್ವವಿದ್ಯಾಲಯ][1]ದ ಯಾವುದೇ ಪ್ರಾಧಿಕಾರದ ಅಥವಾ [1][ವಿಶ್ವವಿದ್ಯಾಲಯ][1]ದ ಯಾವೊಬ್ಬ ವ್ಯಕ್ತಿಯು,–

(ಎ) ಅಸ್ವಸ್ಥ ಚಿತ್ತನಾಗಿದ್ದು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲ್ಪಟ್ಟಿದ್ದರೆ;

(ಬಿ) ಅವಿಮುಕ್ತ ದಿವಾಳಿಯಾಗಿದ್ದರೆ;

(ಸಿ) ನೈತಿಕ ಅಧ:ಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದರೆ;

(ಡಿ) ಖಾಸಗಿ ಬೋಧನಾ ತರಗತಿಗಳನ್ನು ಸ್ವತ: ನಡೆಸುತ್ತಿದ್ದರೆ ಅಥವಾ ನಿರತನಾಗಿದ್ದರೆ;

(ಇ) ಯಾವುದೇ ವಿಧದಲ್ಲಿ, ಎಲ್ಲಿಯೇ, ಯಾವುದೇ ಪರೀಕ್ಷೆಯನ್ನು ನಡೆಸುವಲ್ಲಿ ಅನುಚಿತ ಅಭ್ಯಾಸದಲ್ಲಿ ತೊಡಗಿದ್ದಕ್ಕಾಗಿ ಅಥವಾ ಉತ್ತೇಜಿಸಿದ್ದಕ್ಕಾಗಿ ದಂಡಿತನಾಗಿದ್ದರೆ;

(ಎಫ್) ಪ್ರಾಯೋಜಕ [1][ವಿಶ್ವವಿದ್ಯಾಲಯ][1]ವು ಯಾವುವೇ ಪ್ರಾಧಿಕಾರಗಳ ಅಥವಾ [1][ವಿಶ್ವವಿದ್ಯಾಲಯ][1]ಗಳ ಯಾವೊಬ್ಬ ಸದಸ್ಯನನ್ನು ಆ ಪದವನ್ನು ಹೊಂದಿರುವುದಕ್ಕೆ ಅರ್ಹನಲ್ಲನೆಂದು ಲಿಖಿತದಲ್ಲಿ ಅಭಿಪ್ರಾಯ ನೀಡಿದಾಗಲೆಲ್ಲಾ,

–ಸದಸ್ಯನಾಗಿರುವುದಕ್ಕೆ ಅನರ್ಹನಾಗತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**30. ಖಾಲಿಸ್ಥಾನ ಇರುವ ಕಾರಣದಿಂದಾಗಿ ವ್ಯವಹರಣೆಗಳು ಅಸಿಂಧುವಾಗತಕ್ಕದ್ದಲ್ಲ.–** [1][ವಿಶ್ವವಿದ್ಯಾಲಯ][1]ದ ಯಾವುದೇ ಪ್ರಾಧಿಕಾರದ ಕಾರ್ಯ ಅಥವಾ ವ್ಯವಹರಣೆಗಳು ಕೇವಲ ಅದರಲ್ಲಿ ಯಾವುದೇ ಖಾಲಿಸ್ಥಾನ ಇದೆ ಎಂಬ ಕಾರಣದಿಂದ ಅಥವಾ ಪ್ರಾಧಿಕಾರದ ರಚನೆಯಲ್ಲಿ ದೋಷವಿದೆ ಎಂಬ ಕಾರಣದಿಂದ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**31. ಕಾರ್ಯಸೂಚಿ ವಿಷಯಗಳ ಬಗ್ಗೆ ಉಪಬಂಧಗಳು.–** (1) ಯಾವುದೇ ಕಾರ್ಯಸೂಚಿ ವಿಷಯಗಳನ್ನು ಅಧ್ಯಕ್ಷರ ಲಿಖಿತ ಪೂರ್ವಾನುಮೋದನೆಯನ್ನು ಪಡೆಯದೇ ಪ್ರಬಂಧಕ ಮಂಡಳಿಯ ಅಥವಾ ವ್ಯವಸ್ಥಾಪನಾ ಮಂಡಳಿಯ ಅಥವಾ ಯಾವುದೇ ಸಮಿತಿಯ ಸಭೆಗಳ ಕಾರ್ಯಸೂಚಿಯಲ್ಲಿ ಸೇರಿಸತಕ್ಕದ್ದಲ್ಲ ಅಥವಾ ಚರ್ಚೆಗೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ತೀರ್ಮಾನಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಪಾಲಿಸದೆ ಇರುವ ಸಂದರ್ಭದಲ್ಲಿ, ಅಧ್ಯಕ್ಷರು [1][ವಿಶ್ವವಿದ್ಯಾಲಯ][1]ದ ಯಾವುದೇ ಪದಾಧಿಕಾರಿ ಅಥವಾ ಪದಾಧಿಕಾರಿಗಳು ಅಥವಾ [1][ವಿಶ್ವವಿದ್ಯಾಲಯ][1]ದ ನಿಕಾಯ ಅಥವಾ ನಿಕಾಯಗಳು ತೆಗೆದುಕೊಂಡ ಎಲ್ಲಾ ತೀರ್ಮಾನಗಳನ್ನು ವಿಪರ್ಯಯಗೊಳಿಸುವ ಮೂಲಕ ಪರಿಹಾರ ಕ್ರಮಗಳನ್ನು ಕೂಡಲೇ ಕೈಗೊಳ್ಳಲು ಅಧಿಕಾರವನ್ನು ಎಲ್ಲಾ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಅಂಥ ಪರಿಹಾರ ಕ್ರಮದ ಪರಿಣಾಮವಾಗಿ ಅಧಿನಿಯಮದ ಉಪಬಂಧಗಳನ್ನು ಪಾಲಿಸದೇ [1][ವಿಶ್ವವಿದ್ಯಾಲಯ][1]ದ ಪದಾಧಿಕಾರಿ ಅಥವಾ ಪದಾಧಿಕಾರಿಗಳು ಅಥವಾ [1][ವಿಶ್ವವಿದ್ಯಾಲಯ][1]ದ ನಿಕಾಯ ಅಥವಾ ನಿಕಾಯಗಳು ಕೈಗೊಂಡಿದ್ದ ಎಲ್ಲಾ ಅಂಥ ಕ್ರಮಗಳು, ಮೊದಲಿನಿಂದಲೂ ಶೂನ್ಯ ಮತ್ತು ಅಕೃತ ಎಂದು ಭಾವಿಸತಕ್ಕದ್ದು ಹಾಗೂ ತತ್ಪರಿಣಾಮವಾಗಿ, ಉಪಬಂಧ ಪಾಲಿಸದೇ ಇದ್ದ ವಿಷಯ ಅಥವಾ ನಿರ್ಧಾರದ ಸಂಬಂಧದಲ್ಲಿ ಅದಕ್ಕೆ ಮುಂಚೆ ಇದ್ದ ವಸ್ತುಸ್ಥಿತಿಯೇ ಮುಂದುವರಿಯತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ – V

## ಪರಿನಿಯಮಗಳು ಮತ್ತು ವಿನಿಯಮಗಳು

**32. ಪರಿನಿಯಮಗಳು.–** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಪರಿನಿಯಮಗಳು ಪ್ರಬಂಧಕ ಮಂಡಳಿಯ ಅನುಮೋದನೆಯೊಂದಿಗೆ ವ್ಯವಸ್ಥಾಪನಾ ಮಂಡಳಿಯು ನಿರ್ಧರಿಸಿದಂತೆ [1][ವಿಶ್ವವಿದ್ಯಾಲಯ][1]ಕ್ಕೆ ಮತ್ತು ಸಿಬ್ಬಂದಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಉಪಬಂಧವನ್ನು ಕಲ್ಪಿಸಬಹುದು. ಪರಿನಿಯಮಗಳು ಈ ಮುಂದಿನ ವಿಷಯಗಳಿಗೆ ಸಂಬಂಧಿಸಿರಬಹುದು, ಎಂದರೆ:–

(i) [1][ವಿಶ್ವವಿದ್ಯಾಲಯ][1]ದ ಪ್ರಾಧಿಕಾರಗಳ ಕಾರ್ಯಕಲಾಪಗಳನ್ನು ನಡೆಸುವ ಮತ್ತು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರದ [1][ವಿಶ್ವವಿದ್ಯಾಲಯ][1]ಗಳ ರಚನೆಯ ಕಾರ್ಯವಿಧಾನ;

(ii) ಶಾಶ್ವತ ಶಾಸನಬದ್ಧ ದತ್ತಿ ನಿಧಿ, [1][ವಿಶ್ವವಿದ್ಯಾಲಯ][1]ದ ದತ್ತಿ ನಿಧಿ, ಸಾಮಾನ್ಯ ನಿಧಿ ಹಾಗೂ ಅಭಿವೃದ್ಧಿ ನಿಧಿಗಳ ನಿರ್ವಹಣೆ;

(iii) [1][ಕುಲಪತಿ, ಮುಖ್ಯಕಾರ್ಯನಿರ್ವಹಣಾ ಅಧಿಕಾರಿ ಮತ್ತು ಕುಲಸಚಿವರು (ಸಿಒಒ ಅಂಡ್ ಆರ್) ಹಾಗೂ ಮುಖ್ಯ ವ್ಯಾಸಂಗ ಅಧಿಕಾರಿ ಮತ್ತು][1] ಹಣಕಾಸು ಅಧಿಕಾರಿ ಇವರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(iv) [1][ವಿಶ್ವವಿದ್ಯಾಲಯ][1]ದ ಇತರ ಅಧಿಕಾರಿಗಳ, ಅಧ್ಯಾಪಕರ ಮತ್ತು ನೌಕರರ ನೇಮಕಾತಿಯ ವಿಧಾನ ಹಾಗೂ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(v) [1][ವಿಶ್ವವಿದ್ಯಾಲಯ][1]ದ ಹಾಗೂ ಅದರ ಅಧಿಕಾರಿಗಳು, ವ್ಯಾಸಂಗ ವಿಭಾಗದ (ಫ್ಯಾಕಲ್ಟಿ) ಸದಸ್ಯರು, ನೌಕರರು ಹಾಗೂ ವಿದ್ಯಾರ್ಥಿಗಳ ನಡುವೆ ಉಂಟಾದ ವಿವಾದಗಳನ್ನು ಪರಿಹರಿಸುವ ಕಾರ್ಯವಿಧಾನ;

(vi) ವಿದ್ಯಾಲಯಗಳ ಮತ್ತು ಕೇಂದ್ರಗಳ ಸೃಜನೆ, ರದ್ಧತಿ ಅಥವಾ ಪುನಾರಚನೆ;

(vii) ಇತರ ವಿಶ್ವವಿದ್ಯಾಲಯಗಳು ಅಥವಾ ಉನ್ನತ ಕಲಿಕಾ [1][ವಿಶ್ವವಿದ್ಯಾಲಯ][1]ಗಳ ಜೊತೆಯಲ್ಲಿ ಸಹಕರಿಸಬೇಕಾದ ರೀತಿ;

(viii) ಗೌರವ ಪದವಿಗಳ ನೀಡಿಕೆಯ ಕಾರ್ಯವಿಧಾನ;

(ix) ಫ್ರೀಶಿಪ್‍ಗಳ ಮತ್ತು ವಿದ್ಯಾರ್ಥಿವೇತನಗಳ ಮಂಜೂರಾತಿಗೆ ಸಂಬಂಧಿಸಿದ ಉಪಬಂಧಗಳು;

(x) ವಿವಿಧ ವ್ಯಾಸಂಗ ಕ್ರಮಗಳಲ್ಲಿನ ಸೀಟುಗಳ ಸಂಖ್ಯೆ ಮತ್ತು ಅಂಥ ವ್ಯಾಸಂಗ ಕ್ರಮಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಕಾರ್ಯವಿಧಾನ;

(xi) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಿಂದ ನಿಷೇಧಿಸದೇ ಇರುವ ವಿವಿಧ ವ್ಯಾಸಂಗ ಕ್ರಮಗಳಿಗೆ ವಿದ್ಯಾರ್ಥಿಗಳಿಗೆ ವಿಧಿಸಬಹುದಾದ ಶುಲ್ಕ;

(xii) ಸಂಶೋಧನಾ ವೇತನಗಳು (ಫೆಲೋಶಿಪ್‍ಗಳು), ವಿದ್ಯಾರ್ಥಿವೇತನಗಳು, ಶಿಷ್ಯವೇತನಗಳು, ಫ್ರೀಶಿಪ್‍ಗಳು, ಪದಕಗಳು ಹಾಗೂ ಬಹುಮಾನಗಳನ್ನು ಪ್ರಾರಂಭಿಸುವುದು;

(xiii) ಹುದ್ದೆಗಳನ್ನು ಸೃಜಿಸುವ ಮತ್ತು ರದ್ದುಗೊಳಿಸುವ ಕಾರ್ಯವಿಧಾನ;

(xiv) [1][ವಿಶ್ವವಿದ್ಯಾಲಯ][1]ದ ವಿವಿಧ ಪ್ರಾಧಿಕಾರಗಳ ಪದಾವಧಿಯನ್ನು ನಿರ್ಧರಿಸುವುದು;

(xv) ನಿರ್ದಿಷ್ಟಪಡಿಸಬಹುದಾದ ಇತರ ವಿಷಯಗಳು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**33. ಪರಿನಿಯಮಗಳ ರಚನೆ ವಿಧಾನ.–** (1) ವ್ಯವಸ್ಥಾಪನಾ ಮಂಡಳಿಯು ರಚಿಸಿದ ಮೊದಲ ಪರಿನಿಯಮಗಳನ್ನು ಅನುಮೋದನೆಗಾಗಿ ಪ್ರಬಂಧಕ ಮಂಡಳಿಗೆ ಸಲ್ಲಿಸತಕ್ಕದ್ದು.

(2) ವ್ಯವಸ್ಥಾಪನಾ ಮಂಡಳಿಯು ಸಲ್ಲಿಸಿದ ಮೊದಲ ಪರಿನಿಯಮಗಳನ್ನು ಪ್ರಬಂಧಕ ಮಂಡಳಿಯು ಪರಿಗಣಿಸತಕ್ಕದ್ದು ಹಾಗೂ ತಾನು ಅವಶ್ಯವೆಂದು ಭಾವಿಸಬಹುದಾದ ಅಂಥ ಮಾರ್ಪಾಡುಗಳು, ಯಾವುದಾದರು ಇದ್ದಲ್ಲಿ, ಅವುಗಳೊಡನೆ ತನ್ನ ಅನುಮೋದನೆಯನ್ನು ನೀಡತಕ್ಕದ್ದು.

(3) ಪ್ರಬಂಧಕ ಮಂಡಳಿಯು, ಮೂವತ್ತು ದಿನಗಳ ಅವಧಿಯೊಳಗೆ ಪರಿನಿಯಮಗಳ ಅನುಮೋದನೆಗೆ ಸಂಬಂಧಿಸಿದಂತೆ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಲು ವಿಫಲವಾದಲ್ಲಿ, ಇದನ್ನು ಪ್ರಬಂಧಕ ಮಂಡಳಿಯು ಅನುಮೋದಿಸಿದೆ ಎಂದು ಭಾವಿಸತಕ್ಕದ್ದು.

(4) [1][ವಿಶ್ವವಿದ್ಯಾಲಯ][1]ವು, ಪ್ರಬಂಧಕ ಮಂಡಳಿಯು ಅನುಮೋದಿಸಿದ ಮೊದಲ ಪರಿನಿಯಮಗಳನ್ನು [1][ವಿಶ್ವವಿದ್ಯಾಲಯ][1]ದ ಅಧಿಸೂಚನೆಯಲ್ಲಿ ಪ್ರಕಟಿಸತಕ್ಕದ್ದು ಮತ್ತು ತದನಂತರ ಮೊದಲ ಪರಿನಿಯಮಗಳು ಅದರ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**34. ಪರಿನಿಯಮಗಳ ತಿದ್ದುಪಡಿಯ ಅಧಿಕಾರ.–** ವ್ಯವಸ್ಥಾಪನ ಮಂಡಳಿಯು, ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸಬಹುದು ಅಥವಾ ಪರಿನಿಯಮಗಳ ತಿದ್ದುಪಡಿ ಮಾಡಬಹುದು ಅಥವಾ ಅವನ್ನು ನಿರಸನಗೊಳಿಸಬಹುದು.

**35. ವಿನಿಯಮಗಳು.–** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ವಿನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧಗಳನ್ನು ಕಲ್ಪಿಸಬಹುದು, ಎಂದರೆ:–

(i) [1][ವಿಶ್ವವಿದ್ಯಾಲಯ][1]ಕ್ಕೆ ವಿದ್ಯಾರ್ಥಿಗಳ ಪ್ರವೇಶ ಮತ್ತು ವಿದ್ಯಾರ್ಥಿ ಪಟ್ಟಿಯಲ್ಲಿ ಅವರುಗಳ ದಾಖಲಾತಿ ಹಾಗೂ ಮುಂದುವರಿಕೆ;

(ii) [1][ವಿಶ್ವವಿದ್ಯಾಲಯ][1]ದ ಎಲ್ಲಾ ಪದವಿಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ನಿಗದಿಪಡಿಸತಕ್ಕ ವ್ಯಾಸಂಗ ಕ್ರಮಗಳು;

(iii) ಪದವಿಗಳ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳ ಪ್ರದಾನ;

(iv) ಸಂಶೋಧನಾ ವೇತನಗಳು (ಫೆಲೋಶಿಪ್), ವಿದ್ಯಾರ್ಥಿವೇತನಗಳು, ಶಿಷ್ಯವೇತನಗಳು, ಪದಕಗಳು ಮತ್ತು ಬಹುಮಾನಗಳನ್ನು ನೀಡಲು ಷರತ್ತುಗಳು;

(v) ಪರೀಕ್ಷೆಗಳನ್ನು ನಡೆಸುವುದು ಹಾಗೂ ಪರೀಕ್ಷೆ ನಡೆಸುವ [1][ವಿಶ್ವವಿದ್ಯಾಲಯ][1]ಗಳು, ಪರೀಕ್ಷಕರು, ಪರೀಕ್ಷಾ ಮೇಲ್ವಿಚಾರಕರು, ಟ್ಯಾಬುಲೇಟರ್‌ಗಳು ಮತ್ತು ಮಾಡರೇಟರ್‌ಗಳ ನೇಮಕಾತಿಯ ಷರತ್ತುಗಳು ಮತ್ತು ವಿಧಾನ ಹಾಗೂ ಅವರ ಕರ್ತವ್ಯಗಳು;

(vi) [1][ವಿಶ್ವವಿದ್ಯಾಲಯ][1]ದ ಪರೀಕ್ಷೆಗಳಿಗೆ, ಪದವಿಗಳಿಗೆ ಹಾಗೂ ಇತರ ಶೈಕ್ಷಣಿಕ ಪ್ರಶಸ್ತಿಗಳಿಗೆ ಪ್ರವೇಶಕ್ಕೆ ವಿಧಿಸತಕ್ಕ ಶುಲ್ಕ;

(vii) [1][ವಿಶ್ವವಿದ್ಯಾಲಯ][1]ದಲ್ಲಿ ಅಥವಾ ಒಂದು ಘಟಕ ಕಾಲೇಜಿನಲ್ಲಿ ವಿದ್ಯಾರ್ಥಿಗಳ ನಿವಾಸಕ್ಕಾಗಿ ಷರತ್ತುಗಳು;

(viii) [1][ವಿಶ್ವವಿದ್ಯಾಲಯ][1]ದ ಅಥವಾ ಒಂದು ಘಟಕ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಶಿಸ್ತು ಪಾಲನೆ;

(ix) ಈ ಅಧಿನಿಯಮದ ಅಡಿಯಲ್ಲಿನ ನಿಯಮಗಳಲ್ಲಿ ಉಪಬಂಧ ಕಲ್ಪಿಸಬಹುದಾಂಥ ಇತರ ಎಲ್ಲಾ ವಿಷಯಗಳು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**36. ವಿನಿಯಮಗಳ ರಚನೆ ವಿಧಾನ.–** ವಿನಿಯಮಗಳನ್ನು ಶೈಕ್ಷಣಿಕ ಪರಿಷತ್ತು ರಚಿಸತಕ್ಕದ್ದು ಹಾಗೂ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸತಕ್ಕದ್ದು.

**37. ವಿನಿಯಮಗಳ ತಿದ್ದುಪಡಿಗೆ ಅಧಿಕಾರ.–** ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಡನೆ ಶೈಕ್ಷಣಿಕ ಪರಿಷತ್ತು ಹೊಸ ವಿನಿಯಮಗಳನ್ನು ಅಥವಾ ಹೆಚ್ಚುವರಿ ವಿನಿಯಮಗಳನ್ನು ರಚಿಸಬಹುದು ಅಥವಾ ವಿನಿಯಮಗಳ ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

**38. ಶುಲ್ಕ ನಿಯಂತ್ರಣ ಸಮಿತಿ.–** (1) ಸರ್ಕಾರವು ರಚಿಸಿದ ನಿವೃತ್ತ ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮುಖ್ಯಸ್ಥರಾಗಿರುವ ಮತ್ತು [1][ವಿಶ್ವವಿದ್ಯಾಲಯ][1]ದ ಅಧ್ಯಕ್ಷರು ಮತ್ತು [1][ಕುಲಪತಿ][1]ಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು ಒಬ್ಬ ಮಹಿಳೆಯೂ ಸೇರಿದಂತೆ ಪ್ರಬಂಧಕ ಮಂಡಳಿಯು ನಾಮನಿರ್ದೇಶಿಸಿದ ಇಬ್ಬರು ಶಿಕ್ಷಣ ತಜ್ಞರು ಇವರುಗಳನ್ನು ಒಳಗೊಂಡ ಒಂದು ಶುಲ್ಕ ನಿಯಂತ್ರಣ ಸಮಿತಿಯು, 9ನೇ ಪ್ರಕರಣದ ಅಡಿಯಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗಾಗಿ ಮೀಸಲಿರಿಸಿದ ವಿಶ್ವವಿದ್ಯಾಲಯದ ಸ್ಥಾನಗಳ ಶುಲ್ಕವನ್ನು ನಿಯಂತ್ರಿಸತಕ್ಕದ್ದು. ಸಮಿತಿಯಲ್ಲಿ ಈ ಉದ್ದೇಶಕ್ಕಾಗಿ ಒಬ್ಬರು ಖ್ಯಾತ ಚಾರ್ಟರ್ಡ್ ಅಕೌಂಟೆಂಟ್ ರವರನ್ನು ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳತಕ್ಕದ್ದು.

(2) ಸಮಿತಿಯು, ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಶುಲ್ಕದ ಸ್ವರೂಪವನ್ನು ನಿಗದಿಪಡಿಸುವುದಕ್ಕಾಗಿ ಪರಿನಿಯಮಗಳಿಗೆ ಸುಸಂಗತವಾದ ಕಾರ್ಯವಿಧಾನ ಮತ್ತು ಪದ್ಧತಿಗಳನ್ನು ರೂಪಿಸತಕ್ಕದ್ದು.

(3) ಸಮಿತಿಯು ಹಾಗೆ ಪ್ರಸ್ತಾಪಿಸಿದ ಶುಲ್ಕದ ಸ್ವರೂಪವನ್ನು ಪ್ರಬಂಧಕ ಮಂಡಳಿಯ ಮುಂದೆ ಅದರ ಅನುಮೋದನೆಗಾಗಿ ಮಂಡಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ – VI

## ಸಂಕೀರ್ಣ

**39. ನೌಕರರ ಸೇವಾ ಷರತ್ತುಗಳು.–** (1) ಪ್ರತಿಯೊಬ್ಬ ನೌಕರನು ಲಿಖಿತ ಕರಾರಿನ ಅಡಿಯಲ್ಲಿ ನೇಮಕಗೊಳ್ಳತಕ್ಕದ್ದು ಮತ್ತು ಅದನ್ನು [1][ವಿಶ್ವವಿದ್ಯಾಲಯ][1]ದಲ್ಲಿ ಇಟ್ಟುಕೊಳ್ಳತಕ್ಕದ್ದು ಹಾಗೂ ಅದರ ಒಂದು ಪ್ರತಿಯನ್ನು ಸಂಬಂಧಪಟ್ಟ ನೌಕರನಿಗೆ ನೀಡತಕ್ಕದ್ದು.

(2) ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಕಾರ್ಯವಿಧಾನಗಳ ಮೂಲಕ ನಿಯಂತ್ರಿಸತಕ್ಕದ್ದು.

(3) ಕರಾರಿನಿಂದಾಗಿ [1][ವಿಶ್ವವಿದ್ಯಾಲಯ][1]ದ ಮತ್ತು ನೌಕರನ ಮಧ್ಯದಲ್ಲಿ ಉದ್ಭವಿಸಬಹುದಾದ ಯಾವುದೇ ವಿವಾದವನ್ನು, ಲಿಖಿತ ಕರಾರಿನಲ್ಲಿ ಉಪಬಂಧಿಸಿದ ವಿಧಾನದಲ್ಲಿ ಹಾಗೂ ನಿಯಮಗಳ ಮೂಲಕ ಗೊತ್ತುಪಡಿಸಬಹುದಾದ ಪರಿನಿಯಮಗಳು ಮತ್ತು ವಿನಿಯಮಗಳು ಹಾಗೂ ಯಾವುವೇ ಇತರ ಷರತ್ತುಗಳಿಗನುಸಾರವಾಗಿ ಪರಿಹರಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**40. ಮೇಲ್ಮನವಿ ಹಕ್ಕು.–** [1][ವಿಶ್ವವಿದ್ಯಾಲಯ][1]ವು ತನ್ನ ನೌಕರರ ಅಥವಾ ವಿದ್ಯಾರ್ಥಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡ ಸಂದರ್ಭದಲ್ಲಿ, ಬಾಧಿತ ನೌಕರ ಅಥವಾ ವಿದ್ಯಾರ್ಥಿಗಳು ವ್ಯವಸ್ಥಾಪನಾ ಮಂಡಳಿಗೆ ಮೇಲ್ಮನವಿ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**41. ಭವಿಷ್ಯ ನಿಧಿ .–** [1][ವಿಶ್ವವಿದ್ಯಾಲಯ][1]ವು, ತನ್ನ ನೌಕರರ ಪ್ರಯೋಜನಕ್ಕಾಗಿ, ಪರಿನಿಯಮಗಳು ಮತ್ತು ಜಾರಿಯಲ್ಲಿರುವ ಕಾನೂನುಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಭವಿಷ್ಯ ಅಥವಾ ನಿವೃತ್ತಿ ವೇತನ ನಿಧಿಯನ್ನು ರಚಿಸತಕ್ಕದ್ದು ಹಾಗೂ ಅಂಥ ವಿಮಾ ಯೋಜನೆಗಳನ್ನು ಒದಗಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**42. [1][ವಿಶ್ವವಿದ್ಯಾಲಯ][1]ದ ಪ್ರಾಧಿಕಾರಗಳು ಮತ್ತು ನಿಕಾಯಗಳ ರಚನೆಯ ವಿವಾದಗಳು.–** [1][ವಿಶ್ವವಿದ್ಯಾಲಯ][1]ದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನಾಗಿ ಯಾವೊಬ್ಬ ವ್ಯಕ್ತಿಯು ಸೂಕ್ತವಾಗಿ ಆಯ್ಕೆಯಾಗಿದ್ದಾನೆಯೇ ಅಥವಾ ನೇಮಕಗೊಂಡಿದ್ದಾನೆಯೇ ಅಥವಾ ಅದಕ್ಕೆ ಅರ್ಹನಾಗಿದ್ದಾನೆಯೇ ಎಂಬ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಆ ವಿಷಯವನ್ನು ತೀರ್ಮಾನಕ್ಕಾಗಿ ಅಧ್ಯಕ್ಷರಿಗೆ ಕಳುಹಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**43. ಸಮಿತಿಗಳ ರಚನೆ.–** ಅಧ್ಯಾಯ–IVರಲ್ಲಿ ನಮೂದಿಸಿದ [1][ವಿಶ್ವವಿದ್ಯಾಲಯ][1]ದ ಯಾವುದೇ ಪ್ರಾಧಿಕಾರವು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅಧಿಕಾರವನ್ನು ಹೊಂದಿರುವ ಅಂಥ ಪ್ರಾಧಿಕಾರದ ಅಂಥ ಸದಸ್ಯರನ್ನು ಒಳಗೊಂಡ ಅಂಥ ಪ್ರಾಧಿಕಾರದ ಒಂದು ಸಮಿತಿಯನ್ನು ರಚಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**44. ಆಕಸ್ಮಿಕವಾಗಿ ಖಾಲಿಯಾದ ಸ್ಥಾನಗಳನ್ನು ತುಂಬುವುದು.–** [1][ವಿಶ್ವವಿದ್ಯಾಲಯ][1]ದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಸದಸ್ಯರ ಪೈಕಿ ಯಾವುದೇ ಸ್ಥಾನವು ಆಕಸ್ಮಿಕವಾಗಿ ಖಾಲಿಯಾದರೆ, ಯಾರ ಖಾಲಿ ಸ್ಥಾನವನ್ನು ತುಂಬಬೇಕಾಗಿ ಬಂದಿದೆಯೋ ಆ ಸದಸ್ಯರನ್ನು ಯಾವ ರೀತಿಯಲ್ಲಿ ಆರಿಸಲಾಗಿತ್ತೋ ಅದೇ ರೀತಿಯಲ್ಲಿ ಹೊಸ ಸದಸ್ಯರನ್ನು ಆರಿಸಿ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ಖಾಲಿ ಸ್ಥಾನವನ್ನು ಭರ್ತಿ ಮಾಡಿದ ವ್ಯಕ್ತಿಯು ಯಾವ ಸದಸ್ಯನ ಸ್ಥಾನದಲ್ಲಿ ಭರ್ತಿಯಾಗಿರುವರೋ ಆ ಸದಸ್ಯರು ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯರಾಗಿ ಉಳಿಯುತ್ತಿದ್ದ ಬಾಕಿ ಅವಧಿಯವರೆಗೆ ಮಾತ್ರ ಸದಸ್ಯರಾಗಿರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**45. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮ ಅಥವಾ ನಿಯಮ ಅಥವಾ ಪರಿನಿಯಮಗಳು ಅಥವಾ ವಿನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ [1][ವಿಶ್ವವಿದ್ಯಾಲಯ][1]ದ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ನಡೆಸಲು ಅವಕಾಶ ಇರತಕ್ಕದ್ದಲ್ಲ.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**46. ತಾತ್ಕಾಲಿಕ ಉಪಬಂಧಗಳು.–** ಈ ಅಧಿನಿಯಮ ಮತ್ತು ಪರಿನಿಯಮ ಹಾಗೂ ವಿನಿಯಮಗಳ ಯಾವುವೇ ಇತರ ಉಪಬಂಧಗಳಲ್ಲಿ ಏನೇ ಇದ್ದರೂ,–

(i) ಮೊದಲ [1][ಕುಲಪತಿ][1] ಯವರನ್ನು ಅಧ್ಯಕ್ಷರು ನೇಮಕಮಾಡತಕ್ಕದ್ದು;

(ii) ಮೊದಲ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರನ್ನು, ಮೊದಲ ಡೀನರುಗಳನ್ನು ಮತ್ತು ಮೊದಲ ಹಣಕಾಸು ಅಧಿಕಾರಿಯವರನ್ನು [1][ಕುಲಪತಿ][1]ಗಳು ನೇಮಕಮಾಡತಕ್ಕದ್ದು; ಮತ್ತು

(iii) ಮೊದಲ ವ್ಯವಸ್ಥಾಪನಾ ಮಂಡಳಿ, ಮೊದಲ ಹಣಕಾಸು ಸಮಿತಿ, ಮೊದಲ ದೂರ ಶಿಕ್ಷಣ ಸಮಿತಿ, ಮೊದಲ ಸಂಶೋಧನಾ ಪರಿಷತ್ತು ಹಾಗೂ ಮೊದಲ ಶೈಕ್ಷಣಿಕ ಪರಿಷತ್ತನ್ನು ಪ್ರಬಂಧಕ ಮಂಡಳಿಯ ಅಧ್ಯಕ್ಷರ ಅನುಮೋದನೆಯೊಂದಿಗೆ [1][ಕುಲಪತಿ][1]ಗಳು ರಚಿಸತಕ್ಕದ್ದು.

**47. ಶಾಶ್ವತ ಶಾಸನಬದ್ಧ ದತ್ತಿ ನಿಧಿ.–** (1) [1][ವಿಶ್ವವಿದ್ಯಾಲಯ][1]ವು, ಕನಿಷ್ಠ ಇಪ್ಪತ್ತೈದು ಕೋಟಿ ರೂಪಾಯಿಗಳನ್ನುಳ್ಳ ಒಂದು ಶಾಶ್ವತ ಶಾಸನಬದ್ಧ ದತ್ತಿ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಈ ನಿಧಿಯನ್ನು ಸ್ವಪ್ರೇರಣೆಯಿಂದ ಹೆಚ್ಚಿಸಬಹುದು ಆದರೆ ಅದಕ್ಕಿಂತ ಕಡಿಮೆ ಮಾಡತಕ್ಕದ್ದಲ್ಲ.

(2) [1][ವಿಶ್ವವಿದ್ಯಾಲಯ][1]ವು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಶಾಶ್ವತ ಶಾಸನಬದ್ಧ ದತ್ತಿ ನಿಧಿಯ ಹಣವನ್ನು ಹೂಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) [1][ವಿಶ್ವವಿದ್ಯಾಲಯ][1]ವು, ಸಾಮಾನ್ಯ ನಿಧಿ ಅಥವಾ ಅಭಿವೃದ್ಧಿ ನಿಧಿಯಿಂದ ಯಾವುದೇ ಮೊಬಲಗನ್ನು ಶಾಶ್ವತ ಶಾಸನಬದ್ಧ ದತ್ತಿ ನಿಧಿಗೆ ವರ್ಗಾವಣೆ ಮಾಡಬಹುದು. [1][ವಿಶ್ವವಿದ್ಯಾಲಯ]ವನ್ನು ಸಮಾಪನಗೊಳಿಸುವ ಸಂದರ್ಭವನ್ನು ಹೊರತುಪಡಿಸಿ, ಇತರ ಯಾವ ಸಂದರ್ಭದಲ್ಲೂ ಶಾಶ್ವತ ಶಾಸನಬದ್ಧ ದತ್ತಿ ನಿಧಿಯಿಂದ ಯಾವುದೇ ಮೊಬಲಗನ್ನೂ ಇತರ ಉದ್ದೇಶಗಳಿಗಾಗಿ ವರ್ಗಾಯಿಸತಕ್ಕದ್ದಲ್ಲ.

(4) ಶಾಶ್ವತ ಶಾಸನಬದ್ಧ ದತ್ತಿ ನಿಧಿಯಿಂದ ಸ್ವೀಕರಿಸಿದ ವರಮಾನದ ಶೇಕಡಾ ಎಪ್ಪತ್ತೈದರಷ್ಟನ್ನು [1][ವಿಶ್ವವಿದ್ಯಾಲಯ][1]ದ ಅಭಿವೃದ್ಧಿ ಅಥವಾ ಸಾಮಾನ್ಯ ಕೆಲಸಗಳ ಉದ್ದೇಶಗಳಿಗಾಗಿ ಬಳಸಿಕೊಳ್ಳತಕ್ಕದ್ದು. ಉಳಿದ ಶೇಕಡಾ ಇಪ್ಪತ್ತೈದರಷ್ಟನ್ನು ಶಾಶ್ವತ ಶಾಸನಬದ್ಧ ದತ್ತಿ ನಿಧಿಯಲ್ಲಿ ಪುನಃ ತೊಡಗಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**48. [1][ವಿಶ್ವವಿದ್ಯಾಲಯ][1]ದ ದತ್ತಿ ನಿಧಿ.–** (1) [1][ವಿಶ್ವವಿದ್ಯಾಲಯ][1]ವು, ಪ್ರಾಯೋಜಕ [1][ವಿಶ್ವವಿದ್ಯಾಲಯ][1]ವು ನಿರ್ಧರಿಸಬಹುದಾದಂತೆ ನಿಧಿಗಳನ್ನು ಒಳಗೊಂಡ [1][ವಿಶ್ವವಿದ್ಯಾಲಯ][1]ದ ದತ್ತಿ ನಿಧಿಯನ್ನು ಸ್ಥಾಪಿಸತಕ್ಕದ್ದು. ಇದು ಕಾಲಕಾಲಕ್ಕೆ ಸ್ವೀಕರಿಸಬಹುದಾದ ದೇಣಿಗೆಗಳು ಮತ್ತು ಇತರ ನಿಧಿಗಳನ್ನು ಒಳಗೊಂಡಿರತಕ್ಕದ್ದು.

(2) [1][ವಿಶ್ವವಿದ್ಯಾಲಯ][1]ವು, ಪರಿನಿಯಮಗಳ ಮತ್ತು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ವಿಧಾನದಲ್ಲಿ [1][ವಿಶ್ವವಿದ್ಯಾಲಯ][1]ದ ದತ್ತಿನಿಧಿಯನ್ನು ಹೂಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) [1][ವಿಶ್ವವಿದ್ಯಾಲಯ][1]ದ ದತ್ತಿ ನಿಧಿಯು, [1][ವಿಶ್ವವಿದ್ಯಾಲಯ][1]ವು ತನ್ನ ಸಾಮಾಜಿಕ ಧ್ಯೇಯೋದ್ದೇಶಗಳನ್ನು ನೆರವೇರಿಸುವ ಸಂದರ್ಭದಲ್ಲಿ ಮತ್ತು/ಅಥವಾ ಮುಂಗಾಣದ ಸನ್ನಿವೇಶದಲ್ಲಿ ಉದ್ಭವಿಸಬಹುದಾದ ಹಣಕಾಸು ಸವಾಲುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ, ಸ್ವಇಚ್ಛೆಯಿಂದ ನಿರ್ವಹಿಸಿಕೊಂಡು ಬರಲು ಮತ್ತು ಜವಾಬ್ದಾರಿಯಿಂದ ಹಣ ಹೂಡಿಕೆ ಮಾಡಲು ಇಚ್ಛೆಯುಳ್ಳವರಾಗಿ ಸ್ವಯಂ ವಿಧಿಸಿಕೊಂಡ ನಿಧಿಯಾಗಿರತಕ್ಕದ್ದು.

(4) [1][ವಿಶ್ವವಿದ್ಯಾಲಯ][1]ವು, ಸಾಮಾನ್ಯ ನಿಧಿ ಅಥವಾ ಅಭಿವೃದ್ಧಿ ನಿಧಿಯಿಂದ ಯಾವುದೇ ಮೊಬಲಗನ್ನು [1][ವಿಶ್ವವಿದ್ಯಾಲಯ][1]ದ ದತ್ತಿ ನಿಧಿಗೆ ವರ್ಗಾಯಿಸಬಹುದು. [1][ವಿಶ್ವವಿದ್ಯಾಲಯ][1]ದ ಸಮಾಪನಗೊಳಿಸುವ ಸಂದರ್ಭವನ್ನು ಹೊರತುಪಡಿಸಿ, ಇತರ ಯಾವ ಸಂದರ್ಭಗಳಲ್ಲೂ [1][ವಿಶ್ವವಿದ್ಯಾಲಯ][1]ದ ದತ್ತಿ ನಿಧಿಯಿಂದ ಯಾವುದೇ ಮೊಬಲಗನ್ನು ಇತರ ಉದ್ದೇಶಗಳಿಗಾಗಿ ವರ್ಗಾಯಿಸತಕ್ಕದ್ದಲ್ಲ.

(5) [1][ವಿಶ್ವವಿದ್ಯಾಲಯ][1]ದ ದತ್ತಿ ನಿಧಿಯಿಂದ ಸ್ವೀಕರಿಸಿದ ವರಮಾನದ ಶೇಕಡಾ ಎಂಬತ್ತರಷ್ಟನ್ನು [1][ವಿಶ್ವವಿದ್ಯಾಲಯ][1]ದ ಅಭಿವೃದ್ಧಿ ಅಥವಾ ಸಾಮಾನ್ಯ ಕೆಲಸದ ಉದ್ದೇಶಗಳಿಗಾಗಿ ಬಳಸಿಕೊಳ್ಳತಕ್ಕದ್ದು. ಉಳಿದ ಶೇಕಡಾ ಇಪ್ಪತ್ತರಷ್ಟನ್ನು [1][ವಿಶ್ವವಿದ್ಯಾಲಯ][1]ದ ದತ್ತಿ ನಿಧಿಯಲ್ಲಿ ಪುನಃ ತೊಡಗಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**49. ಸಾಮಾನ್ಯ ನಿಧಿ.–** (1) [1][ವಿಶ್ವವಿದ್ಯಾಲಯ][1]ವು, ಒಂದು ಸಾಮಾನ್ಯ ನಿಧಿಯನ್ನು ಸ್ಥಾಪಿಸತಕ್ಕದ್ದು. ಇದರಲ್ಲಿ ಈ ಮುಂದಿನ ಮೊಬಲಗುಗಳನ್ನು ಜಮಾ ಮಾಡತಕ್ಕದ್ದು, ಎಂದರೆ:–

(i) [1][ವಿಶ್ವವಿದ್ಯಾಲಯ][1]ವು ವಿಧಿಸಬಹುದಾದ ಎಲ್ಲಾ ಶುಲ್ಕಗಳು;

(ii) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದೇ ಇರುವ, ಯಾವುದೇ ಇತರ ಮೂಲದಿಂದ ಸ್ವೀಕರಿಸಲಾದ ಎಲ್ಲಾ ಮೊತ್ತ;

(iii) [1][ವಿಶ್ವವಿದ್ಯಾಲಯ][1]ಕ್ಕೆ ಮಾಡಿದ ಎಲ್ಲಾ ದೇಣಿಗೆಗಳು;

(iv) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದೇ ಇರುವ, ಯಾವೊಬ್ಬ ಇತರ ವ್ಯಕ್ತಿ ಅಥವಾ [1][ವಿಶ್ವವಿದ್ಯಾಲಯ][1]ವು ಈ ಸಂಬಂಧದಲ್ಲಿ ಕೊಟ್ಟ ಎಲ್ಲಾ ದೇಣಿಗೆಗಳು/ವಂತಿಗೆಗಳು;

(2) ಸಾಮಾನ್ಯ ನಿಧಿಗೆ ಜಮಾ ಮಾಡುವ ನಿಧಿಗಳನ್ನು [1][ವಿಶ್ವವಿದ್ಯಾಲಯ][1]ದ ಎಲ್ಲಾ ಆವರ್ತಕ ವೆಚ್ಚಗಳನ್ನು ಭರಿಸಲು ಉಪಯೋಗಿಸಕೊಳ್ಳತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**50. ಅಭಿವೃದ್ಧಿ ನಿಧಿ.–** (1) [1][ವಿಶ್ವವಿದ್ಯಾಲಯ][1]ವು, ಒಂದು ಅಭಿವೃದ್ಧಿ ನಿಧಿಯನ್ನು ಸಹ ಸ್ಥಾಪಿಸತಕ್ಕದ್ದು. ಇದರಲ್ಲಿ ಈ ಮುಂದಿನ ಮೊಬಲಗುಗಳನ್ನು ಜಮಾ ಮಾಡತಕ್ಕದ್ದು, ಎಂದರೆ:–

(i) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದೇ ಇರುವ, ವಿದ್ಯಾರ್ಥಿಗಳಿಂದ ವಿಧಿಸಬಹುದಾದ ಅಭಿವೃದ್ಧಿ ಶುಲ್ಕಗಳು;

(ii) [1][ವಿಶ್ವವಿದ್ಯಾಲಯ][1]ದ ಅಭಿವೃದ್ಧಿಯ ಉದ್ದೇಶಗಳಿಗಾಗಿ ಯಾವುದೇ ಇತರ ಮೂಲಗಳಿಂದ ಸ್ವೀಕರಿಸಿದ ಎಲ್ಲಾ ಮೊತ್ತ;

(iii) [1][ವಿಶ್ವವಿದ್ಯಾಲಯ][1]ಕ್ಕೆ ಮಾಡಿದ ಎಲ್ಲಾ ವಂತಿಗೆಗಳು;

(iv) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದೇ ಇರುವ, ಯಾವೊಬ್ಬ ಇತರ ವ್ಯಕ್ತಿ ಅಥವಾ [1][ವಿಶ್ವವಿದ್ಯಾಲಯ][1]ವು ಈ ಸಂಬಂಧದಲ್ಲಿ ಕೊಟ್ಟ ಎಲ್ಲಾ ದೇಣಿಗೆಗಳು/ವಂತಿಗೆಗಳು; ಮತ್ತು

(v) ಶಾಶ್ವತ ಶಾಸನಬದ್ಧ ದತ್ತಿ ನಿಧಿಯಿಂದ ಸ್ವೀಕರಿಸಲಾದ ವರಮಾನಗಳು.

(2) ಅಭಿವೃದ್ಧಿ ನಿಧಿಗೆ ಕಾಲಕಾಲಕ್ಕೆ ಜಮಾ ಮಾಡಿದ ನಿಧಿಯನ್ನು [1][ವಿಶ್ವವಿದ್ಯಾಲಯ][1]ದ ಅಭಿವೃದ್ಧಿಗಾಗಿ ಉಪಯೋಗಿಸಕೊಳ್ಳತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**51. ನಿಧಿಗಳ ನಿರ್ವಹಣೆ.– 47,** 48, 49 ಮತ್ತು 50ನೇ ಪ್ರಕರಣಗಳಡಿಯಲ್ಲಿ ಸ್ಥಾಪಿಸಲಾದ ನಿಧಿಗಳನ್ನು ಪ್ರಬಂಧಕ ಮಂಡಳಿಯ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು, ನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿಯಂತ್ರಿಸತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು.

**52. ವಾರ್ಷಿಕ ವರದಿ.–** (1) [1][ವಿಶ್ವವಿದ್ಯಾಲಯ][1]ದ ವಾರ್ಷಿಕ ವರದಿಯನ್ನು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನದಲ್ಲಿ ತಯಾರಿಸತಕ್ಕದ್ದು ಮತ್ತು ಪ್ರಬಂಧಕ ಮಂಡಳಿಗೆ ಅದರ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

(2) ಪ್ರಬಂಧಕ ಮಂಡಳಿಯು ವಾರ್ಷಿಕ ವರದಿಯನ್ನು ತನ್ನ ಸಭೆಯಲ್ಲಿ ಪರಿಗಣಿಸತಕ್ಕದ್ದು ಹಾಗೂ ಅದನ್ನು ಮಾರ್ಪಾಡುಗಳೊಡನೆ ಅಥವಾ ಮಾರ್ಪಾಡುಗಳಿಲ್ಲದೆ ಅನುಮೋದಿಸಬಹುದು.

(3) ಪ್ರಬಂಧಕ ಮಂಡಳಿಯು ಸೂಕ್ತವಾಗಿ ಅನುಮೋದಿಸಿದ ವಾರ್ಷಿಕ ವರದಿಯ ಒಂದು ಪ್ರತಿಯನ್ನು ಪ್ರತಿವರ್ಷದ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದ ತರುವಾಯ ಬರುವ ಡಿಸೆಂಬರ್ 31ಕ್ಕೆ ಮೊದಲು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**53. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) [1][ವಿಶ್ವವಿದ್ಯಾಲಯ][1]ದ ವಾರ್ಷಿಕ ಲೆಕ್ಕ ಪತ್ರ ಮತ್ತು ಜಮಾ ಖರ್ಚು ಪಟ್ಟಿಯನ್ನು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನದಲ್ಲಿ ತಯಾರಿಸತಕ್ಕದ್ದು ಮತ್ತು [1][ವಿಶ್ವವಿದ್ಯಾಲಯ][1]ಕ್ಕೆ ಎಲ್ಲಾ ಮೂಲಗಳಿಂದ ಪ್ರಾಪ್ತವಾಗುವ ಅಥವಾ ಸ್ವೀಕರಿಸಲಾಗುವ ಎಲ್ಲಾ ನಿಧಿಗಳು ಹಾಗೂ ವಿತರಿಸಿದ ಅಥವಾ ಸಂದಾಯ ಮಾಡಿದ ಎಲ್ಲಾ ಮೊಬಲಗುಗಳನ್ನು [1][ವಿಶ್ವವಿದ್ಯಾಲಯ][1]ವು ನಿರ್ವಹಿಸುವ ಲೆಕ್ಕಪತ್ರದಲ್ಲಿ ನಮೂದಿಸತಕ್ಕದ್ದು.

(2) [1][ವಿಶ್ವವಿದ್ಯಾಲಯ][1]ದ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರತಿ ವರ್ಷವೂ ಭಾರತದ ಚಾರ್ಟರ್ಡ್ ಅಕೌಂಟೆಂಟ್‌ಗಳ [1][ವಿಶ್ವವಿದ್ಯಾಲಯ][1]ದ ಸದಸ್ಯರಾಗಿರುವ ಒಬ್ಬ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(3) ವಾರ್ಷಿಕ ಲೆಕ್ಕಪತ್ರಗಳು ಮತ್ತು ಜಮಾ ಖರ್ಚು ಪಟ್ಟಿಯನ್ನು ಲೆಕ್ಕಪರಿಶೋಧನಾ ವರದಿಯೊಡನೆ, ಪ್ರತಿ ವರ್ಷದ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದ ತರುವಾಯ ಬರುವ ನವೆಂಬರ್ 30ಕ್ಕೆ ಮೊದಲು ಪ್ರಬಂಧಕ ಮಂಡಳಿಗೆ ಸಲ್ಲಿಸತಕ್ಕದ್ದು.

(4) ವಾರ್ಷಿಕ ಲೆಕ್ಕಪತ್ರಗಳು, ಜಮಾಖರ್ಚು ಪಟ್ಟಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಪ್ರಬಂಧಕ ಮಂಡಳಿಯು ತನ್ನ ಸಭೆಯಲ್ಲಿ ಪರ್ಯಾಲೋಚಿಸತಕ್ಕದ್ದು ಮತ್ತು ಪ್ರಬಂಧಕ ಮಂಡಳಿಯು ಅದನ್ನು ತನ್ನ ಅಭಿಪ್ರಾಯಗಳೊಡನೆ ಸರ್ಕಾರಕ್ಕೆ ಪ್ರತಿ ವರ್ಷದ ಡಿಸೆಂಬರ್ 31ಕ್ಕೆ ಮೊದಲು ಕಳುಹಿಸತಕ್ಕದ್ದು.

(5) ಲೆಕ್ಕ ಪರಿಶೋಧಕರ ವರದಿಯಲ್ಲಿನ ಯಾವುದೇ ವಿಷಯಕ ಮಾರ್ಪಾಡಿನ ಸಂದರ್ಭದಲ್ಲಿ, ಸರ್ಕಾರವು [1][ವಿಶ್ವವಿದ್ಯಾಲಯ][1]ಕ್ಕೆ ನಿರ್ದೇಶನಗಳನ್ನು ನೀಡಬಹುದು, ಮತ್ತು ಅಂಥ ನಿರ್ದೇಶನಗಳಿಗೆ [1][ವಿಶ್ವವಿದ್ಯಾಲಯ][1]ವು ಬದ್ಧವಾಗಿರತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**54. [1][ವಿಶ್ವವಿದ್ಯಾಲಯ][1]ವು ದಾಖಲೆಗಳ ರುಜುವಾತಿನ ಮಾದರಿ.–** [1][ವಿಶ್ವವಿದ್ಯಾಲಯ][1]ದ ಯಾವುದೇ ಪ್ರಾಧಿಕಾರ ಅಥವಾ ಸಮಿತಿಯ ಯಾವುದೇ ರಶೀದಿ, ಅರ್ಜಿ, ಸೂಚನೆ, ಆದೇಶ, ವ್ಯವಹರಣೆ ಅಥವಾ ಗೊತ್ತುವಳಿಯು ಅಥವಾ [1][ವಿಶ್ವವಿದ್ಯಾಲಯ][1]ದ

ಸ್ವಾಧೀನದಲ್ಲಿರುವ ಇತರ ದಾಖಲೆಗಳು ಅಥವಾ [1][ವಿಶ್ವವಿದ್ಯಾಲಯ][1]ವು ಯುಕ್ತವಾಗಿ ನಿರ್ವಹಿಸುವ ಯಾವುದೇ ರಿಜಿಸ್ಟರ್‌ನಲ್ಲಿಯ ಯಾವುದೇ ನಮೂದುಗಳ ಪ್ರತಿಯನ್ನು, ಅದರ ಮೇಲೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕುಲಸಚಿವರು ಪ್ರಮಾಣೀಕರಿಸಿದ್ದರೆ, ಅದನ್ನು ಅಂಥ ರಶೀದಿ, ಅರ್ಜಿ, ಸೂಚನೆ, ಆದೇಶ, ವ್ಯವಹರಣೆ, ಗೊತ್ತುವಳಿ ಅಥವಾ ದಾಖಲೆ ಅಥವಾ ರಿಜಿಸ್ಟರ್‌ನಲ್ಲಿ ಇರುವ ನಮೂದನ್ನು ಮೇಲ್ನೋಟದ ಸಾಕ್ಷ್ಯವೆಂಬುದಾಗಿ ಸ್ವೀಕರಿಸತಕ್ಕದ್ದು ಮತ್ತು ವಿಷಯಗಳ ಸಾಕ್ಷಿಯಾಗಿ ಅಂಗೀಕರಿಸತಕ್ಕದ್ದು ಹಾಗೂ ಮೂಲ ದಾಖಲೆಗಳನ್ನೇ ಸಲ್ಲಿಸಿದ್ದರೆ ಅದನ್ನು, ದಾಖಲಿಸಿರುವ ವಿಷಯಗಳು ಮತ್ತು ವಹಿವಾಟುಗಳ ಸಾಕ್ಷ್ಯವಾಗಿ ಅಂಗೀಕರಿಸಲಾಗುತ್ತಿತ್ತೋ, ಅದೇ ರೀತಿಯಲ್ಲಿ ಇವನ್ನೂ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**55. ನಿರ್ದೇಶನಗಳನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಥವಾ ಅದರಲ್ಲಿ ಇರುವ ಯಾವುವೇ ಉಪಬಂಧಗಳನ್ನು ಅಥವಾ ಅದರಡಿಯಲ್ಲಿ ರಚಿಸಿದ ಯಾವುವೇ ನಿಯಮಗಳು ಅಥವಾ ಆದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ [1][ವಿಶ್ವವಿದ್ಯಾಲಯ][1]ಕ್ಕೆ ನಿರ್ದೇಶನ ನೀಡುವುದು ಅವಶ್ಯವೆಂದು ಅಥವಾ ಉಚಿತವೆಂದು ಅಭಿಪ್ರಾಯಪಟ್ಟಲ್ಲಿ ಅದು ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು [1][ವಿಶ್ವವಿದ್ಯಾಲಯ][1]ದ ಪ್ರಬಂಧಕ ಮಂಡಳಿ ಅಥವಾ ಸಂದರ್ಭಾನುಸಾರವಾಗಿ ವ್ಯವಸ್ಥಾಪನಾ ಮಂಡಳಿಯು ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**56. ದಂಡಗಳು.–** (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಉಪಬಂಧಗಳನ್ನು ಅಥವಾ ಯಾವುದೇ ಪರೀಕ್ಷಾ ವಿಷಯಗಳನ್ನು ಅಥವಾ ಪದವಿಗಳನ್ನು ನೀಡುವುದಕ್ಕೆ ಅಥವಾ ಅಂಕಪಟ್ಟಿಗಳನ್ನು ನೀಡುವುದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಉಲ್ಲಂಘನೆಗಳನ್ನು ಮಾಡುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಆರು ತಿಂಗಳ ಅವಧಿಗಿಂತ ಕಡಿಮೆಯಲ್ಲದ ಆದರೆ ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ವಿಶ್ವವಿದ್ಯಾಲಯವೂ ಸಹ ಒಳಗೊಂಡಿರುವಲ್ಲಿ, ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಈ ಅಧಿನಿಯಮದ ಅಡಿಯಲ್ಲಿ ನೀಡಲಾದ ಅನುಮತಿ ಪತ್ರವನ್ನು ಹಿಂತೆಗೆದುಕೊಳ್ಳತಕ್ಕದ್ದು

(2) ಈ ಪ್ರಕರಣದ ಅಡಿಯಲ್ಲಿನ ದಂಡವನ್ನು ಇತರ ಯಾವುದೇ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ದಂಡಕ್ಕೆ ಬಾಧಕವಾಗದಂತೆ ವಿಧಿಸಬಹುದು.

**57. ಪ್ರವೇಶಿಸುವ ಮತ್ತು ತನಿಖೆ ಮಾಡುವ ಅಧಿಕಾರ.–** ಈ ಉದ್ದೇಶಕ್ಕಾಗಿ, ರಾಜ್ಯಸರ್ಕಾರದಿಂದ ಪ್ರಾಧಿಕೃತಗೊಂಡ 'ಎ' ಸಮೂಹದ ಅಧಿಕಾರಿ ದರ್ಜೆಗಿಂತ ಕಡಿಮೆಇಲ್ಲದ ದರ್ಜೆಯ ಯಾವೊಬ್ಬ ಅಧಿಕಾರಿಯು, ಕರ್ನಾಟಕ ಶೈಕ್ಷಣಿಕ [1][ವಿಶ್ವವಿದ್ಯಾಲಯ][1]ಗಳ (ಕ್ಯಾಪಿಟೇಶನ್ ಶುಲ್ಕ ನಿಷೇಧ) ಅಧಿನಿಯಮ, 1984ರ (1984ರ ಕರ್ನಾಟಕ ಅಧಿನಿಯಮ 37) ಅಡಿಯಲ್ಲಿ ನಿರ್ದಿಷ್ಟಪಡಿಸಿರಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಆ ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತಹವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ಪ್ರಾಧಿಕೃತನಾದ ಅಧಿಕಾರಿ ಎಂಬುದಾಗಿ ಭಾವಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**58. [1][ವಿಶ್ವವಿದ್ಯಾಲಯ][1]ವನ್ನು ಸಮಾಪನಗೊಳಿಸಲು ನಿರ್ದೇಶನವನ್ನು ನೀಡುವ ಅಧಿಕಾರ.–** (1) [1][ವಿಶ್ವವಿದ್ಯಾಲಯ][1]ವು, ತನ್ನ ರಚನೆ ಅಥವಾ ನಿಗಮನವನ್ನು ನಿಯಂತ್ರಿಸುವ ಕಾನೂನಿಗೆ ಅನುಸಾರವಾಗಿ ತನ್ನ ಸಮಾಪನವನ್ನು ಉದ್ದೇಶಿಸಿದ್ದಲ್ಲಿ, ಅದು ಕನಿಷ್ಠ ಆರು ತಿಂಗಳ ಪೂರ್ವ ಲಿಖಿತ ನೋಟಿಸನ್ನು ಸರ್ಕಾರಕ್ಕೆ ನೀಡತಕ್ಕದ್ದು.

(2) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಈ ಕೆಳಗಿನವುಗಳ ಬಗ್ಗೆ, ಎಂದರೆ:–

(i) ಪದವಿಯನ್ನು ನೀಡುವುದಕ್ಕಾಗಿ ಬೋಧನೆಯ ಗುಣಮಟ್ಟ;

(ii) ಶಿಕ್ಷಣದ ಗುಣಮಟ್ಟ;

(iii) ಉನ್ನತ ಶಿಕ್ಷಣದ ವ್ಯಾಪಾರೀಕರಣವನ್ನು ತಡೆಗಟ್ಟುವುದು;

(iv) ಅಧಿನಿಯಮದ ಉಪಬಂಧಗಳ ಉಲ್ಲಂಘನೆಯ ಬಗ್ಗೆ, ಯಾವುದಾದರೂ ಇದ್ದಲ್ಲಿ,

– ಇವುಗಳ ಬಗ್ಗೆ [1][ವಿಶ್ವವಿದ್ಯಾಲಯ][1]ದ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸತಕ್ಕದ್ದು ಮತ್ತು ಸರ್ಕಾರಕ್ಕೆ ವರದಿಯನ್ನು ಕಳುಹಿಸತಕ್ಕದ್ದು.

(3) ದುರ್ವ್ಯವಹರಣೆ, ದುರಾಡಳಿತ ಮತ್ತು ಅಶಿಸ್ತು ಆಗಿದೆ ಎಂಬುದನ್ನು ಗುರುತಿಸಿದರೆ, ಸರ್ಕಾರವು, [1][ವಿಶ್ವವಿದ್ಯಾಲಯ][1]ದ ಆಡಳಿತವರ್ಗದವರಿಗೆ ಆಡಳಿತವನ್ನು ಸರಿಪಡಿಸಬೇಕೆಂದು ನಿರ್ದೇಶನಗಳನ್ನು ನೀಡತಕ್ಕದ್ದು. ನಿಯಮಿಸಬಹುದಾದ ಅಂಥ ಅವಧಿಯೊಳಗೆ ಆ ನಿರ್ದೇಶನಗಳನ್ನು ಪಾಲಿಸದಿದ್ದಲ್ಲಿ [1][ವಿಶ್ವವಿದ್ಯಾಲಯ][1]ವನ್ನು ಅಥವಾ ಅದರ ಯಾವುದೇ ವ್ಯಾಸಂಗ ಕ್ರಮವನ್ನು (ಕೋರ್ಸ್) ಸಮಾಪನಗೊಳಿಸುವ ಬಗ್ಗೆ ತೀರ್ಮಾನವನ್ನು ಕೈಗೊಳ್ಳುವ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(4) [1][ವಿಶ್ವವಿದ್ಯಾಲಯ][1]ವನ್ನು ಅಥವಾ ಅದರ ಯಾವುದೇ ವ್ಯಾಸಂಗ ಕ್ರಮವನ್ನು ಸಮಾಪನಗೊಳಿಸುವ ವಿಧಾನವು, ಸರ್ಕಾರವು ಈ ಸಂಬಂಧದಲ್ಲಿ ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, [1][ವಿಶ್ವವಿದ್ಯಾಲಯ][1]ವು ತನ್ನ ಕಾರಣಗಳನ್ನು ಹೇಳಿಕೊಳ್ಳಲು ಸಮಂಜಸ ಅವಕಾಶಗಳನ್ನು ನೀಡಿದ ಹೊರತು ಅಂಥ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(5) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟಿಸನ್ನು ಸ್ವೀಕರಿಸಿದ ಮೇಲೆ, ಸರ್ಕಾರವು ಸಂಬಂಧಿಸಿದ ನಿಯಂತ್ರಣಾ ಪ್ರಾಧಿಕಾರದೊಡನೆ ಸಮಾಲೋಚಿಸಿ, [1][ವಿಶ್ವವಿದ್ಯಾಲಯ][1]ವನ್ನು ಅಥವಾ ಅದರ ಯಾವುದೇ ವ್ಯಾಸಂಗ ಕ್ರಮವನ್ನು ಸಮಾಪನಗೊಳಿಸಲು ಉದ್ದೇಶಿಸಿದ ದಿನಾಂಕದಿಂದ, [1][ವಿಶ್ವವಿದ್ಯಾಲಯ][1]ದಲ್ಲಿ ನಿಯತ ವ್ಯಾಸಂಗ ಕ್ರಮಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಕೊನೆಯ ತಂಡ (ಬ್ಯಾಚ್) ತನ್ನ ವ್ಯಾಸಂಗ ಕ್ರಮವನ್ನು ಮುಗಿಸುವವರೆಗೆ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ [1][ವಿಶ್ವವಿದ್ಯಾಲಯ][1]ದ ಆಡಳಿತಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**59. ಸಮಾಪನೆಯ ಸಂದರ್ಭದಲ್ಲಿ [1][ವಿಶ್ವವಿದ್ಯಾಲಯ][1]ದ ವೆಚ್ಚಗಳು.–** (1) 50ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ [1][ವಿಶ್ವವಿದ್ಯಾಲಯ][1]ದ ಆಡಳಿತವನ್ನು ಹಸ್ತಾಂತರಗೊಳಿಸುವ ಅವಧಿಯಲ್ಲಿ ಅದರ ಆಡಳಿತಾತ್ಮಕ ವೆಚ್ಚಗಳನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಶಾಶ್ವತ ಶಾಸನಬದ್ಧ ದತ್ತಿ ನಿಧಿ, ಸಾಮಾನ್ಯ ನಿಧಿ ಅಥವಾ ಅಭಿವೃದ್ಧಿ ನಿಧಿಯಿಂದ ಭರಿಸತಕ್ಕದ್ದು.

(2) [1][ವಿಶ್ವವಿದ್ಯಾಲಯ][1]ದ ಆಡಳಿತವನ್ನು ಹಸ್ತಾಂತರಗೊಳಿಸುವ ಅವಧಿಯಲ್ಲಿ [1][ವಿಶ್ವವಿದ್ಯಾಲಯ][1]ದ ವೆಚ್ಚವನ್ನು ಭರಿಸಲು 47, 48, 49 ಮತ್ತು 50ನೇ ಪ್ರಕರಣಗಳ ಅಡಿಯಲ್ಲಿ ಉಲ್ಲೇಖಿಸಲಾದ ನಿಧಿಯು ಸಾಕಷ್ಟು ಇಲ್ಲದಿದ್ದಲ್ಲಿ, ಅಂಥ ವೆಚ್ಚವನ್ನು ಸರ್ಕಾರವು, [1][ವಿಶ್ವವಿದ್ಯಾಲಯ][1]ದ ಸ್ವತ್ತುಗಳು ಮತ್ತು ಆಸ್ತಿಗಳನ್ನು ವಿಲೇ ಮಾಡುವ ಮೂಲಕ ಭರಿಸತಕ್ಕದ್ದು.

1. 2018ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 17.03.2018 ರಿಂದ ಪ್ರತಿಯೋಜಿಸಲಾಗಿದೆ.

**60. ತೊಂದರೆಗಳ ನಿವಾರಣೆಗೆ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ಅಧಿಸೂಚನೆಯ ಮೂಲಕ ಅಥವಾ ಆದೇಶದ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಅಡಿಯಲ್ಲಿ ಅಂಥ ಯಾವುದೇ ಅಧಿಸೂಚನೆ ಅಥವಾ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**61. ರಾಜ್ಯ ಸರ್ಕಾರದ ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ತದನಂತರ ಅಂಥ ನಿಯಮವು ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ. ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

*****

**2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 13**

(2018ರ ಮಾರ್ಚ್ ತಿಂಗಳ ಹದಿನೇಳನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ಅಧಿನಿಯಮ, 2017**

(2018ರ ಮಾರ್ಚ್ ತಿಂಗಳ ಹನ್ನೆರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ಅಧಿನಿಯಮ, 2013ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ 35)ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**4. ಪದಾವಳಿಗಳ ಪ್ರತಿಯೋಜನೆ.–** ಮೂಲ ಅಧಿನಿಯಮದಲ್ಲಿ,–

(i) "ನಿರ್ದೇಶಕ" ಎಂಬ ಪದ ಬರುವ ಕಡೆಗಳಲ್ಲೆಲ್ಲಾ "ಕುಲಪತಿ" ಎಂಬ ಪದವನ್ನು ಪ್ರತ್ಯಯಗಳೊಡನೆ ಪ್ರತಿಯೋಜಿಸತಕ್ಕದ್ದು;

(ii) "ಡೀನ್" ಎಂಬ ಪದ ಬರುವ ಕಡೆಗಳಲ್ಲೆಲ್ಲಾ "ಡೀನ್ ಮತ್ತು ಸಲಹೆಗಾರ" ಎಂಬ ಪದಗಳನ್ನು ಪ್ರತ್ಯಯಗಳೊಡನೆ ಪ್ರತಿಯೋಜಿಸತಕ್ಕದ್ದು; ಮತ್ತು

(iii) "ಸಂಸ್ಥೆ" ಎಂಬ ಪದ ಬರುವ ಕಡೆಗಳಲ್ಲೆಲ್ಲಾ "ವಿಶ್ವವಿದ್ಯಾಲಯ" ಎಂಬ ಪದವನ್ನು ಪ್ರತ್ಯಯಗಳೊಡನೆ ಪ್ರತಿಯೋಜಿಸತಕ್ಕದ್ದು.

ಪ್ರಕರಣ 1,2,6,7,8,12,14,16,17,22,25,26,32 ಮತ್ತು ಹೊಸ ಪ್ರಕರಣ 19ಎ ಇವುಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

No.HFW 90 PTD 2013

Karnataka Government Secretariat
Vikasa Soudha.
Bangalore, Dated: 02.04.2013

**NOTIFICATION**

In exercise of the power conferred by sub-section (3) of section 1 of Anthar Vishaya Aarogya Vignanagalu mattu Tantragnana Samsthe Adhiniyama, 2013 (Karnataka Act 35 of 2013), the Government of Karnataka, hereby appoints the 02.04.2013 as the date on which all the provisions of the said Act shall come into force.

By order and in the Name of the Governor of Karnataka

**(K.N. Hariniyamma)**
Under Secretary to Government.
Health and Family Welfare Department
(IMD and Co-Ordination)